CONDEOLENCE RESOLUTION

re : Demise of Sri Jayachamaraja Wadeyar Ex. Maharaja of Mysore.

†ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ಕಳೆದ ಸೆಪ್ಟಂಬರು 23ನೇ ತಾರೀಖು ಬೆಂಗಳೂರಿನಲ್ಲಿ ನಿಧನ ಹೊಂದಿದ ಶ್ರೀ ಜಯಚಾಮರಾಜ ಒಡೆಯರ್ ಅವರ ನೆನಪಿಗೆ ಶ್ರದ್ಧಾಂಜಲಿ ಸಲ್ಲಿಸುವ ಈ ನಿರ್ಣಯವನ್ನು ಸಭೆಯ ಮುಂದಿಡಲು ಇಚ್ಛಿಸುತ್ತೇನೆ

"ಹಿಂದಿನ ಮೈಸೂರಿನ ಮಹಾರಾಜರಾಗಿ, ರಾಜ್ಯವಿಲೀನೀಕರಣದ ನಂತರ ರಾಜಪ್ರಮುಖರಾಗಿ, ರಾಜ್ಯ ಪುನರ್ರಚನೆಯ ನಂತರ ಮೈಸೂರಿನ ರಾಜ್ಯಪಾಲರಾಗಿ, ಕೆಲವು ಕಾಲ ಹಿಂದಿನ ಮದ್ರಾಸು ರಾಜ್ಯದ ರಾಜ್ಯಪಾಲರಾಗಿ ಶ್ರೀ ಜಯಚಾಮರಾಜ ಒಡೆಯರ್ ಅವರು ನಾಡಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ.

ಮೈಸೂರು ಮಾದರಿ ರಾಜ್ಯವೆಂದು ಪರಿಗಣಿಸಲು ಕಾರಣವಾದ ಯದುವಂಶದ ಉನ್ನತ ಪರಂಪರೆಯನ್ನು ಅವರು ಉಳಿಸಿ ಬೆಳೆಸಿಕೊಂಡು ಬಂದಿದ್ದರು.

ಭಾರತೀಯ ಹಾಗೂ ಪಾಶ್ಚಾತ್ಯ ತತ್ವ ಶಾಸ್ತ್ರಗಳಲ್ಲಿ ಅದ್ಭುತ ಪಾಂಡಿತ್ಯ, ಭಾರತೀಯ ಹಾಗೂ ಪಾಶ್ಚಿಮಾತ್ಯ ಸಂಗೀತಗಳಲ್ಲಿ ಅಸಾಮಾನ್ಯ ಅಭಿರುಚಿಗಳಿಂದ ಪ್ರಪಂಚದಾದ್ಯಂತ ಮನ್ನಣೆಗಳಿಸುದುದೇ ಅಲ್ಲದೆ, ಶ್ರೀ ಜಯಚಾಮರಾಜ ಒಡೆಯರು ಸ್ವಾತಂತ್ರ್ಯಾನಂತರ ಉಂಟಾದ ಬದಲಾವಣೆಗಳ ಸಮಯದಲ್ಲಿ ಸಮಕಾಲೀನ ಪ್ರಜ್ಞೆಯನ್ನು ಪ್ರದರ್ಶಿಸಿ ಜನತೆಯ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದರು.

ಭಾರತೀಯ ಧರ್ಮ, ಸಂಸ್ಕೃತಿ ಹಾಗೂ ಕಲಾ ಪರಂಪರೆಯ ಪ್ರತಿಪಾದಕರಾಗಿ ರಾಜ್ಯದ ಆದರ್ಶ ಆಡಳಿತಗಾರರಾಗಿ ಕನ್ನಡ ನಾಡು, ನುಡಿ, ಜನತೆಯ ಶ್ರೇಯಸ್ಸಿಗೆ ಶಕ್ತಿಮೀರಿ ಶ್ರಮಿಸಿದ ಈ ಶ್ರೇಷ್ಠ ವ್ಯಕ್ತಿಯ ನಿಧನದಿಂದ ತುಂಬಲಾಗದ ನಷ್ಟ ಉಂಟಾಗಿದೆ.

ಶ್ರೀ ಜಯಚಾಮರಾಜ ಒಡೆಯರ್ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿ ವಿಧಾನ ಸಭೆ ಅವರ ನೆನಪಿಗೆ ಗೌರವ ಸೂಚಿಸುತ್ತದೆ. ಅವರ ಕುಟುಂಬ ವರ್ಗದವರಿಗೆ ಈ ಅಗಲಿಕೆಯಿಂದುಂಟಾಗಿರುವ ದು:ಖವನ್ನು ಭರಿಸಲು ದೇವರು ಶಕ್ತಿಯನ್ನು ದಯಪಾನಲಿ ಎಂದು ಪ್ರಾರ್ಥಿಸುತ್ತದೆ"

ಅಧ್ಯಕ್ಷರು.—ನಿರ್ಣಯ ಮಂಡಿಸಲ್ಪಟ್ಟಿದೆ.

"ಹಿಂದಿನ ಮೈಸೂರಿನ ಮಹಾರಾಜರಾಗಿ, ರಾಜ್ಯ ವಿಲೀನೀಕರಣದ ನಂತರ ರಾಜಪ್ರಮುಖರಾಗಿ, ರಾಜ್ಯ ಪುನರ್ರಚನೆಯ ನಂತರ ಮೈಸೂರಿನ ರಾಜ್ಯಪಾಲರಾಗಿ, ಕೆಲವು ಕಾಲ ಹಿಂದಿನ ಮದ್ರಾಸು ರಾಜ್ಯದ ರಾಜ್ಯಪಾಲರಾಗಿ, ಶ್ರೀ ಜಯಚಾಮರಾಜ ಒಡೆಯರ್ ಅವರು ನಾಡಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ.

ಮೈಸೂರು ಮಾದರಿ ರಾಜ್ಯವೆಂದು ಪರಿಗಣಿಸಲು ಕಾರಣವಾದ ಯದುವಂಶದ ಉನ್ನತ ಪರಂಪರೆಯನ್ನು ಅವರು ಉಳಿಸಿ ಬೆಳೆಸಿಕೊಂಡು ಬಂದಿದ್ದರು.

ಭಾರತೀಯ ಹಾಗೂ ಪಶ್ಚಾತ್ಯ ತತ್ವಗಳಲ್ಲಿ ಅದ್ಭುತ ಪಾಂಡಿತ್ಯ ಭಾರತೀಯ ಹಾಗೂ ಪಾಶ್ಚಿಮಾತ್ಯ ಸಂಗೀತಗಳಲ್ಲಿ ಅಸಾಮಾನ್ಯ ಅಭಿರುಚಿಗಳಿಂದ ಪ್ರಪಂಚದಾದ್ಯಂತ ಮನ್ನಣೆ ಗಳಿಸಿದುದೇ ಅಲ್ಲದೆ, ಶ್ರೀ ಜಯಚಾಮರಾಜ ಒಡೆಯರು ಸ್ವಾತಂತ್ರ್ಯಾನಂತರ ಉಂಟಾದ ಬದಲಾವಣೆಗಳ ಸಮಯದಲ್ಲಿ ಸಮಕಾಲೀನ ಪ್ರಜ್ಞೆಯನ್ನು ಪ್ರದರ್ಶಿಸಿ ಜನತೆಯ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದರು.

ಭಾರತೀಯ ಧರ್ಮ, ಸಂಸ್ಕೃತಿ ಹಾಗೂ ಕಲಾ ಪರಂಪರೆಯ ಪ್ರತಿಪಾದಕರಾಗಿ, ರಾಜ್ಯದ ಆದರ್ಶ ಆಡಳಿತಗಾರರಾಗಿ, ಕನ್ನಡ ನಾಡು, ನುಡಿ, ಜನತೆಯ ಶ್ರೇಯಸ್ಸಿಗೆ ಶಕ್ತಿಮೀರಿ ಶ್ರಮಿಸಿದ ಈ ಶ್ರೇಷ್ಠ ವ್ಯಕ್ತಿಯ ನಿಧನದಿಂದ ತುಂಬಲಾಗದ ನಷ್ಟ ಉಂಟಾಗಿದೆ.

ಶ್ರೀ ಜಯಚಾಮರಾಜ ಒಡೆಯರ್ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿ ವಿಧಾನ ಸಭೆ ಅವರ ನೆನಪಿಗೆ ಗೌರವ ಸೂಚಿಸುತ್ತದೆ. ಅವರ ಕುಟುಂಬ ವರ್ಗದವರಿಗೆ ಈ ಅಗಲಿಕೆಯಿಂದುಂಟಾಗಿರುವ ದು:ಖವನ್ನು ಭರಿಸಲು ದೇವರು ಶಕ್ತಿಯನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತದೆ"

---

†Indicate that remarks or speeches have not been revised by the member concerned.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಕಾಲಧರ್ಮಕ್ಕೆ ಅನುಗುಣವಾಗಿ ಅರಸೊತ್ತಿಗೆಯ ಎತ್ತರವನ್ನು ಬಿಟ್ಟು ಜನತೆಯೊಂದಿಗೆ ಒಂದಾಗಿ ಅವರ ಪ್ರೀತಿ ವಿಶ್ವಾಸ ಗಳಿಸಿ, ಬಾಳಿದ ಶ್ರೀ ಜಯಚಾಮರಾಜ ಒಡೆಯರ್ ಅವರು ನಿಧನ ಹೊಂದಿ ಇಂದಿಗೆ ಸುಮಾರು ಆರು ತಿಂಗಳಾಯಿತು.

ಅವರ ನಿಧನದೊಂದಿಗೆ ಮೈಸೂರು ರಾಜ್ಯವನ್ನು ಸುಮಾರು ಐನೂರಕ್ಕೂ ಹೆಚ್ಚು ವರ್ಷಗಳು ಆಳಿದ ಯದುವಂಶದ ಅರಸೊತ್ತಿಗೆ ಅಸ್ತಂಗತವಾಯಿತು. ಇದು ವ್ಯಕ್ತಿಯೊಬ್ಬರ ಅಂತ್ಯ ಮಾತ್ರವಲ್ಲ...ಒಂದು ಪರಂಪರೆಯ ಅಂತ್ಯ. ದೇಶದಾದ್ಯಂತ ಸುಮಾರು ಆರುನೂರು ಸಂಸ್ಥಾನಗಳಲ್ಲಿ ರಾಜ್ಯ ಮಹಾರಾಜರುಗಳು ಆಳಿ ಹೋದರು. ರಾಜತ್ವವೇ ರದ್ದಾಯಿತು.

ಆದರೆ ಮೈಸೂರಿನ ಮಹಾರಾಜರುಗಳಿಗೆ ಜನಮನದಲ್ಲಿ ವಿಶಿಷ್ಟ ಸ್ಥಾನ. ಯದುವಂಶದ ಅರಸರು ಸ್ವಾತಂತ್ರ್ಯಪೂರ್ವದಲ್ಲೂ ಸಹ, ಅಂದಿನ ಪರಿಸ್ಥಿತಿಯ ಇತಿಮಿತಿಗಳಲ್ಲಿ ಆದರ್ಶ ಆಡಳಿತ ನೀಡಿದ ಅರಸರೆನ್ನಿಸಿಕೊಂಡರು. ಮೈಸೂರು ಮಾದರಿ ರಾಜ್ಯವೆಂಬ ಕೀರ್ತಿಗಳಿಸಿಕೊಟ್ಟರು. ರಾಜರ್ಷಿಗಳೆನ್ನಿಸಿಕೊಂಡರು. ಅನಂತರ ಕಾಲಮಾನ ಬದಲಾವಣೆಯನ್ನು ಅರ್ಥಮಾಡಿಕೊಂಡು ಪ್ರಜಾಪ್ರಭುತ್ವ ಪದ್ಧತಿಯ ಸುಸೂತ್ರ ಅನುಷ್ಠಾನಕ್ಕೆ ಅನುವು ಮಾಡಿಕೊಟ್ಟು, ಗೌರವ ಗಳಿಸಿಕೊಂಡುದೇ ಅಲ್ಲ, ವಿಶ್ವಾಸವನ್ನೂ ಗಳಿಸಿಕೊಂಡರು.

ತಮ್ಮ ಹಿರಿಯರು ತೋರಿದ ಹೆದ್ದಾರಿಯಲ್ಲೇ ನಡೆದು ಬಂದ ಶ್ರೀ ಜಯಚಾಮರಾಜ ಒಡೆಯರ್ ಅವರು ಪಟ್ಟಕ್ಕೆ ಬಂದದ್ದು 1940 ರಲ್ಲಿ. ಮಹಾರಾಜರಾಗಿದ್ದುದು ಏಳು ವರ್ಷ ಮಾತ್ರ. ಮುಂದಿನ ಒಂದು ದಶಕದಲ್ಲಿ ಎಲ್ಲಾ ಎಣಿಕೆಗೂ ಮೀರಿದ ತೀವ್ರತರ ಬದಲಾವಣೆಗಳು ತ್ವರಿತಗತಿಯಲ್ಲಿ ನಡೆದು ಹೋದವು ಹಳೆಯದನ್ನೆಲ್ಲಾ ಹಿಂದೆ ಬಿಟ್ಟು ಹೊಸ ಹೊಣೆಗೆ ಮೊದಲಿನಿಂದಲೂ ಸಿದ್ಧರಾಗಿದ್ದರೋ ಎಂಬಂತೆ ಜಯಚಾಮರಾಜ ಒಡೆಯರ್ ಅವರು ಸಂಸ್ಥಾನಗಳ ವಿಲೀನೀಕರಣದ ನಂತರ ಮೈಸೂರಿನ ರಾಜಪ್ರಮುಖರಾಗಿ, ರಾಜ್ಯ ಪುನರ್ರಚನೆಯ ನಂತರ ರಾಜ್ಯಪಾಲರಾಗಿ, ಕೆಲವು ಕಾಲ ಹಿಂದಿನ ಮದ್ರಾಸು ರಾಜ್ಯದ ರಾಜ್ಯಪಾಲರಾಗಿ, ನವಕಾಲೀನ ಪ್ರಜಾಪ್ರಭುತ್ವದ ಧೋರಣೆಗಳಿಗನುಸಾರವಾಗಿ ಸೇವೆ ಸಲ್ಲಿಸಿದರು. ನಮ್ಮ ದೇಶದ ಇತಿಹಾಸದ ಆ ಪರ್ವ ಕಾಲದಲ್ಲಿ ಸಂದರ್ಭೋಚಿತವಾದ ಸಜ್ಜನಿಕೆಯಿಂದ ವರ್ತಿಸಿದ್ದು ಅವರ ಕಾಲ ಪ್ರಜ್ಞೆಗೆ, ಕರ್ತವ್ಯ ಪ್ರಜ್ಞೆಗೆ ಸಾಕ್ಷಿ

ಶ್ರೀ ಜಯಚಾಮರಾಜ ಒಡೆಯರದು ಬಹುಮುಖ ಪಾಂಡಿತ್ಯ, ಪ್ರತಿಭೆಯ ಧೀಮಂತ ವ್ಯಕ್ತಿತ್ವ. ಭಾರತೀಯ ಮತ್ತು ಪಾಶ್ಚಾತ್ಯ ಆಧ್ಯಾತ್ಮ ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದು ಪ್ರಪಂಚದಾದ್ಯಂತ ಅಪಾರ ಮನ್ನಣೆ ಗಳಿಸಿದ್ದರು. ದೂರಪ್ರಾಚ್ಯ, ಯುರೋಪ, ಉತ್ತರ ಮತ್ತು ದಕ್ಷಿಣ ಅಮೆರಿಕ, ಆಫ್ರಿಕ ಮುಂತಾದೆಡೆಗಳಲ್ಲೆಲ್ಲಾ ಅನೇಕ ಬಾರಿ ಸಂಚರಿಸಿ, ಅಲ್ಲಿನ ಪ್ರಮುಖ ವಿಶ್ವವಿದ್ಯಾನಿಲಯಗಳು ಮತ್ತು ಸಂಘ, ಸಂಸ್ಥೆಗಳಲ್ಲಿ ತತ್ವಜ್ಞಾನ, ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ವಿಚಾರಪೂರ್ಣ ಉಪನ್ಯಾಸಗಳನ್ನು ನೀಡಿದ್ದರು. ತತ್ವ ಶಾಸ್ತ್ರದ ವಿವಿಧ ಸ್ವರೂಪಗಳನ್ನು ಆಳವಾಗಿ ಅರಿತಿದ್ದ ಅವರು, ದತ್ತಾತ್ರೇಯ ಮಾರ್ಗ ಮತ್ತು ಧ್ಯೇಯ, ಗೀತೆ ಮತ್ತು ಭಾರತೀಯ ಸಂಸ್ಕೃತಿ. ಧರ್ಮ ಮತ್ತು ಮಾನವ, ಆತ್ಮ ಮತ್ತು ಬ್ರಹ್ಮ ಮುಂತಾದ ಪ್ರೌಢಕೃತಿಗಳನ್ನು ರಚಿಸಿ ದೇಶ ವಿದೇಶಗಳಲ್ಲಿ ಭಾರತೀಯ ದರ್ಶನ ಪರಂಪರೆಯ ಪರಿಚಯ ಮಾಡಿಸಿದರು. ವೇದಶಾಸ್ತ್ರ ಪುರಾಣಗಳಿಗೆ ಪಂಡಿತೋತ್ತಮರಿಂದ ಟೀಕೆ, ಟಿಪ್ಪಣಿಗಳನ್ನು ಬರೆಸಿ, ಕನ್ನಡಕ್ಕೆ ಅನುವಾದ ಮಾಡಿಸಿ ನಮ್ಮ ಸಂಸ್ಕೃತಿ ಸಂಪತ್ತನ್ನು ಶ್ರೀಮಂತಗೊಳಿಸಿದ್ದಾರೆ.

ಅಂತೆಯೇ ಭಾರತೀಯ ಮತ್ತು ಪಾಶ್ಚಿಮಾತ್ಯ ಸಂಗೀತದಲ್ಲಿ ಅವರಿಗೆ ವಿಶೇಷ ಅಭಿರುಚಿ, ಅದ್ಭುತ ಪಾಂಡಿತ್ಯ. ಈ ಎರಡೂ ಸಂಗೀತ ಪ್ರಕಾರಗಳನ್ನು ಅಭ್ಯಾಸ ಮಾಡಿದುದೇ ಅಲ್ಲದೆ, ಸ್ವತಃ ವಾಗ್ಗೇಯಕಾರರಾಗಿ ಹಲವಾರು ಕೃತಿಗಳನ್ನು ರಚಿಸಿ, ಕರ್ನಾಟಕ ಸಂಗೀತಕ್ಕೆ ಅಮೋಘ ಕಾಣಿಕೆ ಸಲ್ಲಿಸಿದ ಮಹಾ ಸಾಧಕರು. ಈ ಸಾಧನೆಗೆ ಮನ್ನಣೆಯಾಗಿಯೇ, ಭಾರತ ಸರ್ಕಾರ ಅವರನ್ನು ಕೇಂದ್ರ ಸಂಗೀತ ನಾಟಕ ಅಕಡೆಮಿಯ ಅಧ್ಯಕ್ಷರನ್ನಾಗಿ ಆರಿಸಿತ್ತು.

ಅವರ ಆಸಕ್ತಿ, ಸಾಧನೆಗಳು ವ್ಯಾಪಕ. ತತ್ವಶಾಸ್ತ್ರ, ಸಾಹಿತ್ಯ, ಸಂಗೀತದಲ್ಲಿರುವಷ್ಟೇ ವಿವಿಧ ಕ್ರೀಡೆಗಳಲ್ಲೂ ಆಸಕ್ತಿ. ಬೇಟೆ, ಕುದುರೆ ಸವಾರಿ ಟೆನಿಸ್ ಅವರಿಗೆ ಪ್ರಿಯವಾದುವು. ಪ್ರಸಿದ್ಧ ಬೇಟೆಗಾರರೂ ವನಜೀವಿ ರಕ್ಷಣೆಯನ್ನು ಅರಿತು, ಭಾರತೀಯ ವನಜೀವಿ ಮಂಡಲಿಯ ಅಧ್ಯಕ್ಷರಾಗಿ ಶ್ರಮಿಸಿದ ದಯಾಮಯಿ.

(ಶ್ರೀ ಡಿ. ದೇವರಾಜ ಅರಸ್)

ತಮ್ಮ ಐವತ್ತೈದು ವರ್ಷಗಳ ಆಯುಸ್ಸಿನಲ್ಲಿ ಜೀವದ ಆಳ, ಎತ್ತರಗಳನ್ನು ಅಳೆದ ಈ ಬಹುಮುಖ ಪ್ರತಿಭೆಯ ಮೇಧಾವಿ ಅಗಲಿಹೋಗಿದ್ದಾರೆ. ಆಳಿದ ಅರಸರೊಬ್ಬರು ಅಗಲಿದರು ಎಂಬುದಕ್ಕಿಂತ ಹೆಚ್ಚಾಗಿ ತಮ್ಮ ಶ್ರೇಯೋಭಿವೃದ್ಧಿಯನ್ನು ಎಂದಿಗೂ ಹಾರೈಸುತ್ತಿದ್ದ ಶ್ರೇಷ್ಠ ವ್ಯಕ್ತಿಯೊಬ್ಬರು ಕಣ್ಮರೆಯಾದರೆಂದು ಕನ್ನಡ ನಾಡಿನ ಜನ ತುಂಬಿದ ಹೃದಯದಿಂದ ಅವರನ್ನು ನೆನೆಸುತ್ತಾರೆ.

ಇತಿಹಾಸದ ಏರುಪೇರುಗಳಿಂದ ಲೌಕಿಕ ವ್ಯವಹಾರದ ನೋವು ನಷ್ಟಗಳಿಂದ ಅಧೀರರಾಗದೆ, ಸದೂರಚಿತ್ತದಿಂದ ಬಾಳಿದ ಮಹನೀಯರು. ರಾಜವಂಶಕ್ಕೆ ಸಹಜವಾಗಿ ಘನತೆ ಗಾಂಭೀರ್ಯಗಳನ್ನು ಹೊಂದಿದ್ದರೂ ಜನಸಾಮಾನ್ಯರೊಂದಿಗೆ ಬೆರೆತು ಅವರ ಆಶೋತ್ತರಗಳನ್ನು ಅರ್ಥಮಾಡಿಕೊಂಡ ಸರಳ ಸ್ವಭಾವ, ಶ್ರೀ ಜಯಚಾಮರಾಜ ಒಡೆಯರ ಅವರ ಹಿರಿಮೆಗೆ ಉಜ್ವಲ ನಿದರ್ಶನ.

ಎರಡು ವರ್ಷಗಳ ಹಿಂದೆ ರಾಜ್ಯೋತ್ಸವ ಸಮಯದಲ್ಲಿ ಅವರಾಡಿದ ಮಾತುಗಳು ಅವರ ಪ್ರಬುದ್ಧ ಚಿಂತನೆಯ ತಾತ್ಪರ್ಯಧಂತಿದೆ :

'ಈಗ ರಾಜತ್ವ ಹೊರಟುಹೋಗಿದೆ. ಸಿಂಹಾಸನ, ಹಕ್ಕುಬಾಧ್ಯತೆಗಳೂ ಹೊರಟುಹೋಗಿವೆ. ಆದರೆ ನಿಮ್ಮ ಹೃದಯ ಸಿಂಹಾಸನದಲ್ಲಿ ಕೂರಿಸಿದ್ದೀರಿ. ಹಿಂದಿದ್ದಕ್ಕಿಂತ ಹೆಚ್ಚಿನ ಸಿಂಹಾಸನ ಹಕ್ಕು ಬಾಧ್ಯತೆಗಳು ಈಗ ದೊರಕಿವೆ ಎಂದು ಭಾವಿಸುತ್ತೇನೆ.'

ಇಂತಹ ವಿಶಾಲ ಮನೋಭಾವದ ಉದಾತ್ತ ಗುಣಗಳ ಅಪಾರ ಸಾಧನೆಯ ಮಹನೀಯರು ನಮ್ಮನ್ನು ಅಗಲಿದ್ದಾರೆ. ಈ ಅಗಲಿಕೆಯಿಂದ ಉಂಟಾಗಿರುವ ನಷ್ಟವನ್ನು ಭರಿಸಲು ಅವರ ಕುಟುಂಬವರ್ಗದವರಿಗೆ ದೇವರು ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

† ಶ್ರೀ ಎಚ್.ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷಿಣಿಯವರೇ ಯದುಕುಲದ ಅರಸರ ಆಳ್ವಿಕೆ, ಪ್ರಜಾವಾತ್ಸಲ್ಯ ಸೌಖ್ಯ ಪಡೆದಿದ್ದ ಮೈಸೂರು ಸಂಸ್ಥಾನದ ಪ್ರಜಾ ಜನರಿಗೆ 1974ರ ಸೆಪ್ಟೆಂಬರ್ 23 ಸೋಮವಾರ ಒಂದು ಮರೆಯಲಾಗದ ದುಃಖದ ದಿನ.

ಕನ್ನಡಿಗರ ವೈಭವದ ಸಾಮ್ರಾಜ್ಯ ವಿಜಯನಗರ ಭಿನ್ನ ವಿಭಿನ್ನಗೊಂಡ ತರುಣದಲ್ಲಿ ಈ ಭಾಗದ ನಾಡವರನ್ನು ಸಂಘಟಿಸಿ ಇವರಿಗೊಂದು ಒಳ್ಳೆಯ ಪ್ರಭುತ್ವ ನೀಡಿದ ಯದುಕುಲದ 575 ವರ್ಷಗಳ ಪರಂಪರೆ ಆ ದಿನ ಜಯಚಾಮರಾಜರಲ್ಲಿ ಮುಕ್ತಾಯಗೊಂಡಿತು.

ಪ್ರಜಾಸತ್ತೆ ಆರಂಭವಾದ ಮೇಲೆ ಯದುಕುಲದ ಅರಸರು ಕಳೆದುಕೊಂಡ ರತ್ನಸಿಂಹಾಸನಕ್ಕೆ ಬದಲಾಗಿ ನಾವು ಅವರನ್ನು ನಮ್ಮ ಹೃದಯ ಸಿಂಹಾಸನದಲ್ಲಿ ನೆಲೆಗೊಳಿಸಿ ಗೌರವಿಸಿದೆವು. ಇದು ಜಯಚಾಮರಾಜರೊಬ್ಬರಿಗೆ ಮಾತ್ರ ಸಂದ ಗೌರವವಾಗಿರಲಿಲ್ಲ. ಯದುಕುಲದ ಆಳ್ವಿಕೆ ಆರಂಭಗೊಂಡ ಕಾಲದಿಂದ ಒಡೆಯರ ಪರಂಪರೆ ನಾಡವರನ್ನು ನಡೆಸಿಕೊಂಡ ಬಗ್ಗೆ ಹೊಂದಿದ್ದ ಅಪೂರ್ವ ಪ್ರಜಾನುರಾಗ, ನಿರಂಕುಶ ಆಳ್ವಿಕೆಯ ದಿನಗಳಲ್ಲೇ ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆಗಳನ್ನು ಸಂಘಟಿಸಿ ಮುಂದಿನ ಪ್ರಜಾಪ್ರಭುತ್ವಕ್ಕೆ ಅಡಿಗಲ್ಲನ್ನು ಹಾಕಿಕೊಟ್ಟ ಭವಿಷ್ಯ, ಕ್ಷೇಮಚಿಂತನೆ ನಾಡಿನ ಉದ್ಯಮ, ಶಿಕ್ಷಣ, ಸಂಸ್ಕೃತಿ ಸಾಹಿತ್ಯಗಳ ಬೆಳವಣಿಗೆಗಾಗಿ ಕೈಗೊಂಡ ಹತ್ತು ಮುಖದ ಯೋಜನೆಗಳು, ನಡೆನುಡಿಗಳಲ್ಲಿ ವ್ಯಕ್ತಗೊಳಿಸಿದ ರಾಜಗಾಂಭೀರ್ಯ, ಋಜು ಜೀವನ ಇವುಗಳಿಗೆ ಕೃತಜ್ಞತೆಯ ಕುರುಹಾಗಿ ಜಯಚಾಮರಾಜ ಒಡೆಯರನ್ನು 1950ರ ನಂತರವೂ ಪೂಜ್ಯಭಾವದಿಂದ ನಡೆಸಿಕೊಂಡೆವು.

ಮೈಸೂರು ಒಡೆಯರು ನಾಡಿನ ಸದ್ಭಾವನೆಗಳ ಪ್ರತೀಕವಾಗಿದ್ದರು. ಸಂಗೀತ, ಸಾಹಿತ್ಯ ಶಿಲ್ಪ ಚಿತ್ರ, ನೃತ್ಯ ಕಲೆಗಳ ಉನ್ನತಿಯ ಸಂಕೇತವಾಗಿದ್ದರು. ಮೈಸೂರು ಜನರಿಗೆ ಅವರು ಕಲಾವಿದರಾಗಲೀ, ಪಂಡಿತರಾಗಲೀ, ಸಾಹಿತಿಗಳಾಗಲೀ, ಸಮಾಜ ಸೇವಕರಾಗಲೀ ಅರಸರ ಆಸ್ಥಾನದ ಗೌರವ ಹೆಮ್ಮೆಯ ಮಾತಾಗಿತ್ತು. ಪ್ರಜೆಗಳ ಕ್ಷೇಮ ಚಿಂತನೆಯಲ್ಲಿ ಅರಸರಿಗೆ ಅಪಾರ ಆಸಕ್ತಿ. ಒಡೆಯರ ಹಿರಿಮೆ ಗೌರವಗಳಲ್ಲಿ ಪ್ರಜಾಜನರಿಗೆ ಅಸಮಾನ್ಯ ಭಕ್ತಿ. ಇದು ಈ ನಾಡಿನಲ್ಲಿ ಬೆಳೆದು ಬಂದ 600 ವರ್ಷಗಳ ಸಂಪ್ರದಾಯ. ಈ ಸಂಪ್ರದಾಯವೆಂದೂ ಭಂಗಹೊಂದಲೇ ಇಲ್ಲ.

ಉಳಿದವರ ಸ್ಥಿತಿ ಹೇಗಾದರೂ ಇರಲಿ, ಮೈಸೂರು ಜನರಿಗೆ ಅರಸರು ಪ್ರತ್ಯಕ್ಷ ದೇವತೆಗಳೇ ಆಗಿದ್ದರು. ಜಯಚಾಮರಾಜರು ಈ ಭಾವನೆಯ ಮೂರ್ತರೂಪಾಗಿದ್ದರು. ಮೈಸೂರು ಅರಸು ಮನೆತನಕ್ಕೆ ಸೇರಿದ ಅರಸರಲ್ಲಿ ಒಬ್ಬಿಬ್ಬರು ಪ್ರಜಾಹಿತದ ಬಗ್ಗೆ ಅಲಕ್ಷ್ಯದಿಂದ ನಡೆದುಕೊಂಡವರು ಸಿಕ್ಕಲೂ ಬಹುದು. ಇದು ಆಗಿನ ಅಧಿಕಾರಿಗಳ ತಪ್ಪು ಮಾರ್ಗದರ್ಶನದಿಂದ ಸಂಭವಿಸಿರಲೂ

ಬಹುದು. ಆದರೆ ಈ ಶಿಷ್ಟ ರಾಜಪರಂಪರೆಯಲ್ಲಿ ಒಬ್ಬೊಬ್ಬರಾದರೂ ಪ್ರಜಾಪೀಡಕ ದೊರೆ ಇರಲಿಲ್ಲ. ತಮ್ಮ ವೈಭವಲಾಲನೆಗಳಿಗಾಗಿ ಪ್ರಜೆಗಳನ್ನು ಹಿಂಡಿ ಹಿಸುಕಲಿಲ್ಲವೆಂಬುದು ಅವರ ಆಳ್ವಿಕೆಯ ಸವಿಯುಂಡ ಮೈಸೂರಿಗರಿಗೆ ನಿರಂತರದ ಅಭಿಮಾನದ ಸಂಗತಿ. ರಾಜ್ಯ ಕೋಶವೆಲ್ಲಾ ತಮ್ಮ ವ್ಯಕ್ತಿಗತವಾದ ಆಸ್ತಿ ಎಂದು ಭ್ರಮಿಸಿಕೊಂಡು, ಉಂಡು ಉಳಿದುದಷ್ಟೇ ಪ್ರಜಾಹಿತಕ್ಕೆಂಬ ಅನುದಾರತೆಯನ್ನೆಂದೂ ರಾಜಮನೆತನ ತೋರಿಲ್ಲ. ಬದಲಾಗಿ ರಾಜಧನದ ಮೊತ್ತ ಗೊತ್ತುಮಾಡಿಕೊಂಡು, ಅದರ ಮಿತಿಯಲ್ಲೇ ತಮ್ಮ ವೆಚ್ಚವನ್ನು ನಿರ್ವಹಿಸಿಕೊಳ್ಳುತ್ತಿದ್ದ ಯದುಕುಲದ ಅರಸರ, ಇಂದಿಗೂ ಆದರ್ಶಪುರುಷರೇ ಆಗಿದ್ದಾರೆ. ಪ್ರಜಾಪ್ರಭುತ್ವದ ಈ ಕಾಲದಲ್ಲೂ ನೌಕರವರ್ಗದ ಅಧಿಕಾರಿಗಳ ಮುಂಭಡ್ತಿ, ಮತ್ತಿತರ ಅಭ್ಯುದಯ ಕಾರ್ಯ ವ್ಯವಹಾರದಲ್ಲಿ ಅಕ್ರಮ ಅನ್ಯಾಯಗಳು ಕಂಡುಬರುತ್ತಿದ್ದಾಗೂ ನಿರಂಕುಶ ಆಡಳಿತವೆಂಬ ಪಟ್ಟ ಕಟ್ಟಿಕೊಂಡ ಅಂದಿನ ಆಡಳಿತದಲ್ಲಿ ಈ ಕೃತ್ರಿಮಗಳು ನಡೆಯಲಿಲ್ಲವೆಂಬುದೂ ನಮ್ಮ ಅಭಿಮಾನಕ್ಕೆ ಕಾರಣ.

ಇಂತಹ ಭವ್ಯ ಪರಂಪರೆಯು ಮುಗಿತಾಯವನ್ನು ಕಂಡಾಗ ವ್ಯಕ್ತಗೊಂಡ ಕರುಳಿನ ಮಿಡಿತ ಹೊಮ್ಮಿದ ಅಶ್ರುಧಾರೆ, ಕೇವಲ ಸ್ವಾಭಾವಿಕ. ತಮ್ಮನ್ನು ಚೆನ್ನಾಗಿ ನಡೆಸಿಕೊಂಡವರ ಬಗ್ಗೆ ಗೌರವ ಕೃತಜ್ಞತೆಗಳನ್ನು ವ್ಯಕ್ತಗೊಳಿಸುವುದರಲ್ಲಿ ಕನ್ನಡಿಗರು ಎಂದೂ ಬಡತನವನ್ನು ತೋರಿಸಿಲ್ಲ.

ಯದುಕುಲಕ್ಕೆ ಸೇರಿದ ಅರಸರ ಪಂಕ್ತಿಯಲ್ಲಿ ಜಯಚಾಮರಾಜರು 25ನೆಯವರು. 1940ರ ಆಗಸ್ಟ್ ತಿಂಗಳಲ್ಲಿ ರಾಜಋಷಿಗಳೆಂಬ ಗೌರವಕ್ಕೆ ಪಾತ್ರರಾಗಿದ್ದ ನಾಲ್ವಡಿ ಕೃಷ್ಣರಾಜರು ದೈವಾಧೀನರಾದಮೇಲೆ ಜಯಚಾಮರಾಜರು ಈ ತೆರವನ್ನು ತುಂಬಿದರು.

ಈಗ ಆ ಹೆಸರಿಗೆ ಮಂಕು ಹಿಡಿಯುತ್ತಿದ್ದರೂ ಒಂದು ಕಾಲಕ್ಕೆ ಮೈಸೂರಿಗೆ 'ಮಾದರಿ' ಎಂಬ ಗುಣವಾಚಕ ಅಂಟಿಕೊಂಡಿತ್ತೆಂಬುದನ್ನು ನಾವು ಹೇಗೆತಾನೆ ಮರೆಯಲು ಸಾಧ್ಯ? ಆ ಹೆಸರನ್ನು ತಂದುಕೊಟ್ಟ ಚೇತನ ಎರಡೂ ಕಾಲಗರ್ಭದಲ್ಲಿ ಲೀನವಾಗಿವೆ. ಕ್ರಿಯಾಶೀಲ ಪ್ರತಿಭೆ, ಅಸಾಧಾರಣ ರಾಜನಿಷ್ಠೆ, ಜನಹಿತದೃಷ್ಟಿ, ಗುಣದಲ್ಲಿ ವಸ್ತುನಿಷ್ಠೆ ಆದರ್ಶವೆನಿಸುವ ನಿಸ್ವಾರ್ಥತೆ ಹಾಗೂ ಸೌಂದರ್ಯ ಪ್ರಜ್ಞೆಗಳಿಗೆ ವಿಶ್ವವಿಖ್ಯಾತರಾದ ಸರ್ ಎಂ.ವಿ. ಮತ್ತು ಸರ್ ಮಿರ್ಜಾರಂತಹ ಮಹಾನುಭಾವರನ್ನು ತಮ್ಮ ದಿವಾನರನ್ನಾಗಿ ನೇಮಿಸಿಕೊಂಡ ಕೃಷ್ಣರಾಜ ಒಡೆಯರೂ ಅಷ್ಟೇ ಮಹಾಪುರುಷರು, ನೇತಾರರೂ ಹೌದು.

ಭವಿಷ್ಯದಲ್ಲಿ ಅಗೋಚರವಾಗಿರುವ ಅಂಶದ ಸುಳಿಯನ್ನು ಮನಗಂಡು ಅದಕ್ಕೆ ತಕ್ಕ ರೀತಿ ಹೊಂದಾಣಿಕೆ ಮಾಡಿಕೊಳ್ಳುವವನೇ ನೇತಾರ-ನಾಯಕ. ಕೃಷ್ಣರಾಜಒಡೆಯರು ಈ ದೂರದೃಷ್ಟಿಯಿಂದಲೇ ಜಯಚಾಮರಾಜರನ್ನು ತರಬೇತುಗೊಳಿಸಿದರು. ಆ ಕಾಲಕ್ಕೆ ವಿಶಿಷ್ಟವೆನಿಸುವಂತೆ ಎಲ್ಲರೊಡಗೂಡಿ ಕಾಲೇಜು ವಿದ್ಯಾಭ್ಯಾಸ ಮಾಡಲು ಕಳುಹಿಸಿಕೊಟ್ಟರು. ಈ ರೀತಿ ಪ್ರಜಾಜನರೊಡನೆ ಕೂಡಿಬಾಳುವ ಮನೋಭಾವ ಮೂಡಿ ಬಂದದ್ದರಿಂದಲೇ ಜಯಚಾಮರಾಜರಿಗೆ ತಮ್ಮ ಹಕ್ಕುಗಳನ್ನು ಒಂದೊಂದಾಗಿ ಬಿಟ್ಟುಕೊಡುವಾಗ ಹಿಂಸೆಯೆನಿಸಲಿಲ್ಲ. ವಿರಾಗಿಯಂತೆ ನಡೆದುಕೊಂಡರು. ಅಧಿಕಾರ ವಹಿಸಿಕೊಂಡಾಗ ಅವರ ಪ್ರಾಯ ಕೇವಲ 23. ಆದರೂ ಪ್ರಬುದ್ಧ ಪ್ರಭುವಿನಂತೆ ನಡೆದುಕೊಂಡು ರಾಜಮನೆತನದ ಗೌರವವನ್ನು ಕಾಪಾಡಿದರು.

ರಾಷ್ಟ್ರದ ಬಡತನಕ್ಕೆ ರಾಜಧನವೊಂದೇ ಕಾರಣವೆಂಬ ರೀತಿಯಲ್ಲಿ ಅಟ್ಟಹಾಸ ಮಾಡಿ ಅದನ್ನು ಕಿತ್ತು ಹಾಕುವ ಆವೇಶದ ಕೃತ್ಯ ಕೈಗೊಳ್ಳುವ ಮೊದಲು ಇಷ್ಟು ಪರಿಜ್ಞಾನ ಅಗತ್ಯವಿತ್ತು.

ಅರಸರ ಆಳ್ವಿಕೆ ಕೊನೆಗೊಂಡಿರಲಿಲ್ಲ. ಭೌಗೋಳಿಕ ಅನುಕೂಲಕ್ಕೆ ತಕ್ಕಂತೆ ಒಂದು ರಾಷ್ಟ್ರದೊಡನೆ ವಿಲೀನಹೊಂದುವ ಅಥವಾ ಸ್ವತಂತ್ರವಾಗಿ ಮುಂದುವರೆವ ಅಧಿಕಾರ ಅವರಿಗೆ ನೀಡಲಾಗಿತ್ತು. ಒಂದುವೇಳೆ ಭಾರತ ಸ್ವಾತಂತ್ರ್ಯ ಪಡೆದುಕೊಂಡ ಅಂದಿನ ದಿನಗಳಲ್ಲಿ ಈ ರಾಜಾಧಿರಾಜರು ಭಾರತ ಸರ್ಕಾರದ ವಿರುದ್ಧ ಒಂದುಗೂಡಿ ನಿಂತಿದ್ದರೆ, ಇಂದಿನ ಭಾರತ ಬೇರೆಯೇ ಆಗಿರುತ್ತಿತ್ತು. ಒಬ್ಬಿಬ್ಬರನ್ನುಳಿದು ಉಳಿದವರೆಲ್ಲ ತಮ್ಮ ಅಧಿಕಾರವನ್ನು ಭಾರತ ಸರ್ಕಾರಕ್ಕೆ ಬಿಟ್ಟುಕೊಟ್ಟರು. ಇಂಥವರಲ್ಲಿ ಜಯಚಾಮರಾಜರು ಮೊದಲಿಗರು.

ರಾಜತ್ವವನ್ನು ಬಿಟ್ಟುಕೊಟ್ಟ ಈ ವಿರಾಗಿ ಮುಂದೆಯೂ ಅಧಿಕಾರಕ್ಕಾಗಿ ನಾಯಕರ ಬೆನ್ನು ಹತ್ತಿ ಓಡಾಡಲಿಲ್ಲ. ರಾಜರುಗಳ ಸಂಘ ಕಟ್ಟಿ ಮನವಿ ಅರ್ಪಣೆ ಅಥವಾ ವಿರೋಧ ಪ್ರದರ್ಶನ ನಡೆಸಲಿಲ್ಲ.

ರಾಜಪದವಿಯಿಂದ ರಾಜಪ್ರಮುಖ, ರಾಜಪ್ರಮುಖ ಪದವಿಯಿಂದ ಸಂವಿಧಾನಕ್ಕೆ ಬದ್ಧವಾಗಿ ರಾಜ್ಯಪಾಲ ಪದವಿಗಳಿಗೆ ಇಳಿದಾಗಲೂ ಕೊನೆಗೆ ರಾಜಧನ ತಪ್ಪಿದಾಗಲೂ ಕೊರಗಲಿಲ್ಲ, ಸೊರಗಲಿಲ್ಲ ಮೂಕರಾಗಿ ಸಹಿಸಿದರು. ಅವರ ನೋವು ಕೇವಲ ಮಿತ ಸಂಖ್ಯೆಯ ಹಿತೈಷಿಗಳಿಗೆ ಮಾತ್ರ ತಿಳಿದಿತ್ತು

(ಶ್ರೀ ಹೆಚ್. ಡಿ. ದೇವೇಗೌಡ)

ತಮ್ಮ ನೋವನ್ನು ಸಾರ್ವಜನಿಕರಿಗೆ ಹೇಳಿಕೊಂಡು ಪ್ರಜಾಜನ ಬೆಂಬಲಗಳಿಸಿಕೊಳ್ಳುವುದು ಒಂದು ಆಂದೋಳನದ ಕಿಚ್ಚು ಹೊತ್ತಿಸುವುದು ಅವರಿಗೆ ಸುಲಭ ಸಾಧ್ಯವಿತ್ತು. ಆದರೆ ಅವರು ಇಂತಹ ಪಾತ್ರವನ್ನು ಪ್ರದರ್ಶಿಸಲೇ ಇಲ್ಲ. ತಪಸ್ವಿಯಂತೆ ಮೌನಧರಿಸಿದರು. ಸಾಗರದಂತೆ ಗಂಭೀರ ಚಿತ್ತರಾದರು, ಜನಸಂಪರ್ಕ ತೊರೆದರು. ಅವರ ಈ ನಿಲುವೆಯು ಕೆಲವು ಸಂಧಿಸಾಧಕರಿಗೆ ಮಹಾವರವೇ ಆಗಿದ್ದುದೊಂದು ಐತಿಹಾಸಿಕ ದುರಂತ. ಜಯಚಾಮರಾಜರನ್ನು ನೆನೆದಾಗಲೆಲ್ಲ ಹಿಂದಿನ ಹತ್ತಾರು ನೆನಪುಗಳು ಕಾಡುತ್ತವೆ. 1940 ರಿಂದ 1947ರ ಅಕ್ಟೋಬರ್ 24ರ ವರೆಗೆ ರಾಜ್ಯಾಧಿಕಾರವನ್ನು ನಿಸ್ಪೃಹತೆಯಿಂದ ನಿರ್ವಹಿಸಿದರು. 1947ರ ಜುಲೈ ನಂತರ ಬ್ರಿಟಿಷ್ ಸರ್ಕಾರದ ಪ್ರತಿನಿಧಿ ನಿರ್ಗಮಿಸಿದ ಮೇಲೆ ಭಾರತದೊಡನೆ ವಿಲೀನಕ್ಕೆ ಅಂಕಿತಕೊಟ್ಟರು. ಅಕ್ಟೋಬರ್ ಕೊನೆಯ ವೇಳೆಗೆ ಜವಾಬ್ದಾರಿ ಸರ್ಕಾರಕ್ಕೆ ಎಡೆಗೊಟ್ಟರು. 1950ರ ಪ್ರಾರಂಭದಲ್ಲಿ ಅವರ ರಾಜತ್ವದ ಸಂಕೇತವೂ ಅಳಿದಾಗ ಅದನ್ನು ಅಳುಕದೆ ಒಪ್ಪಿದರು. ರಾಜಧನ ಮುಂದುವರೆಯಬೇಕೆಂದು ಭಾರತದ ನರೇಶರ ಒಕ್ಕೂಟ ಮೇಲಿಂದ ಮೇಲೆ ದೆಹಲಿಯಾತ್ರೆ, ನ್ಯಾಯಾಲಯಕ್ಕೆ ಮೊರೆ, ನವಪ್ರಭುಗಳ ದರ್ಶನ ಕೈಗೊಂಡಾಗ ಅವುಗಳಿಂದ ದೂರವುಳಿದವರು ನಮ್ಮ ಜಯಚಾಮರಾಜರೊಬ್ಬರೇ.

ರಾಜಮನೆತನದಲ್ಲಿ ಹುಟ್ಟಿ ಯೋಗಾಯೋಗದಿಂದ ರಾಜರಾಗಿ ಇದ್ದುದರಿಂದಲೇ ಅವರು ವಿಖ್ಯಾತರಾಗಲಿಲ್ಲ.

ಅಧ್ಯಯನ ಶೀಲರಾಗಿದ್ದು, ವೇದಾಂತ ಸಾಹಿತ್ಯದಲ್ಲಿ ಅಪಾರ ಒಲವು ಬೆಳಸಿಕೊಂಡು ಸಾಧಕರಂತೆ ದೀಕ್ಷಾಬದ್ಧರಾದರು. ಗಹನ ಅಧ್ಯಯನ ಕೈಗೊಂಡರು, ತಮ್ಮ ಸಮಯವನ್ನು ವ್ಯಾಸಂಗ ವಿವೇಚನೆಗಳಿಗೇ ಮೀಸಲಿಟ್ಟರು. ರಾಜ್ಯಾಧಿಕಾರ ಕೈ ತಪ್ಪಿದ ಮೇಲಂತೂ ಇದೇ ಅವರ ಪೂರ್ಣಕಾಲೀನ ಹವ್ಯಾಸವೆನಿಸಿತು.

"ದತ್ತಾತ್ರೇಯ ಮಾರ್ಗ ಮತ್ತು ಧ್ಯೇಯ," "ಗೀತೆ ಮತ್ತು ಭಾರತೀಯ ಜೀವನ," "ಮತ ಮತ್ತು ಮಾನವ," "ಆತ್ಮ ಮತ್ತು ಬ್ರಹ್ಮ" ಈ ಮಹಾಕೃತಿಗಳು ವಿಶ್ವದ ವೇದಾಂತ ಜ್ಞಾನಭಂಡಾರಕ್ಕೆ ಅವರ ಕೊಡುಗೆಗಳು. ಈ ಸಾಧನೆ ಸಿದ್ಧಿಗಳ ಬಲದಿಂದ ಅವರು ವಿದೇಶಗಳಲ್ಲಿ ಭಾರತೀಯ ವೇದಾಂತದ ವಿಶ್ವಸನೀಯ ವ್ಯಾಖ್ಯಾನಕಾರರೆನಿಸಿದರು. ವಿಸ್ತಾರವಾದ ವಿಶ್ವ ಸಂಚಾರ ಕೈಗೊಂಡು ತಮ್ಮ ಜ್ಞಾನ ವಿಸ್ತಾರದ ಪರಿಚಯ ಮಾಡಿಕೊಟ್ಟರು. ತಮ್ಮ ಜ್ಞಾನದ ವಲಯವನ್ನೂ ವಿಸ್ತರಿಸಿಕೊಂಡರು.

ಸಂಗೀತದ ಕ್ಷೇತ್ರದಲ್ಲೂ ಜಯಚಾಮರಾಜರು ಸಾಧಕರೇ, ನಾಡಿನ ಅನೇಕ ಹಿರಿಯ ಸಂಗೀತಗಾರರಲ್ಲಿ ಅಭ್ಯಾಸ ನಡೆಸಿ ವಾಗ್ಗೇಯಕಾರರಾದರು. ಪಾಶ್ಚಾತ್ಯ ಸಂಗೀತ ವಾದನಗಳಲ್ಲಿ ನೈಪುಣ್ಯ ಸಾಧಿಸಿದರು. ಈ ಕ್ಷೇತ್ರದ ವಿರಳರಪಂಕ್ತಿಗೆ ಸೇರಿದರು.

ಮಹಾರಾಜ ಜಯಚಾಮರಾಜರನ್ನು ಮರೆಯುವ ಸಂಭವವುಂಟು. ಆದರೆ ವೇದಾಂತ ಸಾಧಕ, ಲೇಖಕ ಮತ್ತು ವಾಗ್ಗೇಯಕಾರ ಜಯಚಾಮರಾಜರು ನಿತ್ಯರೇ ಆಗಿರುತ್ತಾರೆ.

ನಡೆ, ನುಡಿ, ಔದಾರ್ಯ, ಧೈರ್ಯ, ತ್ಯಾಗಗಳ ಅಳತೆಗೋಲಿನಲ್ಲ ಅವರೆಂದೂ ಕೆಳಗಿಳಿಯಲಿಲ್ಲ. ತಮ್ಮ ರಾಜತ್ವ,ರಾಜಗಾಂಭೀರ್ಯವನ್ನೆಂದೂ ಬಿಟ್ಟುಕೊಡಲಿಲ್ಲ. ಆದರೆ ಅವರ ಅವಸಾನ ನಿರಾತಂಕವಾಗಿರಲಿಲ್ಲ. ಸುಖವಾದ ಸಾವು ಅವರಿಗೆ ಲಭ್ಯವಾಗಲಿಲ್ಲ. ಲೋಕಕಂಟಕನಾದ ವ್ಯಕ್ತಿ ನರಳಿ ಸಾಯುವಂತೆ ಕೊನೆಕಂಡರು. ತಮ್ಮ ಅಂತ್ಯ ಅವರಿಗೇ ವಿಸ್ಮಯವುಂಟು ಮಾಡಿತು. ಆದ್ದರಿಂದಲೇ "ಹೀಗೇಕಾಯಿತು ಏನಾಗಿದೆ ನಮ್ಮ ವಂಶಕ್ಕೆ" ಎಂದು ಸಾವಿನ ಸಮ್ಮುಖದಲ್ಲಿ ಅವರು ಪ್ರಶ್ನಿಸಿಕೊಂಡರು.

ಇದಕ್ಕೆ ನಮ್ಮ ಹಿರಿಯನಾಯಕರಾದ ಕೆ. ಹನುಮಂತಯ್ಯನವರು ಒಪ್ಪಬಹುದಾದ ಉತ್ತರ ನೀಡಿದ್ದಾರೆ. ರಾಜನಿಷ್ಠೆ ಮತ್ತು ರಾಜ್ಯನಿಷ್ಠರೂ ಆದ ಪ್ರಾಮಾಣಿಕ ಅಧಿಕಾರಿಗಳ ನೆರವು ಮಹಾರಾಜರಿಗೆ ದೊರೆತ್ತಿದ್ದಷ್ಟು ಕಾಲವೂ ಅವರು ಕಷ್ಟಕ್ಕೆ ಸಿಕ್ಕಲಿಲ್ಲ. ರಾಜರ ಹಿತ ಯಾವುದೆಂಬುದನ್ನು ಆ ಅಧಿಕಾರಿಗಳು ನಿರ್ಧರಿಸಿ ಮಹಾರಾಜರನ್ನು ಆಪತ್ತಿನಿಂದ ರಕ್ಷಿಸಿದರು. ಇಂತಹ ಅಧಿಕಾರಿಗಳ ರಕ್ಷಣೆ ತಪ್ಪಿಹೋದ ನಂತರವೇ ಮಹಾರಾಜರು ಹಲವು ಬಗೆಯ ಕಷ್ಟಕ್ಲೇಶಗಳಿಗೆ ಸಿಕ್ಕಿದ್ದು.

ಕೊಂಕುತನ, ಕೃತ್ರಿಮಗಳ ಪರಿಚಯವೇ ಪಡೆಯದಿದ್ದ ಜಯಚಾಮರಾಜರು ಎಲ್ಲವನ್ನೂ ನಂಬಿದರು, ಎಲ್ಲರನ್ನೂ ನಂಬಿದರು. ಅವರ ಈ ಹಾಲು ಮನಸ್ಸಿನ ದುರ್ಲಾಭ ಪಡೆದವರು ಯಾರು ಯಾರೆಂಬುದು ಜನತೆಗೆ ಗೊತ್ತಿದೆ. ನೇರವಾಗಿ ಸುಲಿದವರು, ಸುಲಿದವರಿಂದ ಸುಲಿದುಕೊಂಡವರು ಮೇಲು ನೋಟಕ್ಕೆ ಹಿತೈಷಿಗಳಂತೆ ನಟಿಸಿದರು, ಅವರಿಗೆ ಅನುಕೂಲ ಮಾಡಿಕೊಡುವ ಪ್ರಯತ್ನ ನಡೆಸಿ ಸ್ವಾನುಕೂಲ ಸಾಧಿಸಿಕೊಂಡವರು, ಇವರನ್ನು ಜಯಚಾಮರಾಜರು ಪತ್ತೆ ಹಚ್ಚಲೇ ಇಲ್ಲ. ಪತ್ತೆ ಹಚ್ಚಿದರೆ ಅವರ ಸಮಸ್ಯೆಗಳ ಸುಗಮ ಇತ್ಯರ್ಥಕ್ಕೆ ಅತಂಕಗಳೇನೂ ಇರಲಿಲ್ಲ. ಈ ಕಾರಣದಿಂದಲೇ ಅವರ ಸಾವಿಗೆ, ರೋಗಕ್ಕಿಂತಲೂ ಹೆಚ್ಚಾಗಿ ನಾನು ಮೇಲೆ ಉದಹರಿಸಿದ ಒಬ್ಬೊಬ್ಬರೂ ಕಾರಣರಾಗಿದ್ದಾರೆಂಬುದು ಜನ ಜನಿತ ಇದು ಹಾಗಿರಲಿ.

ನಮಗಂತೂ ಭರಿಸಲಾರದ ಶೋಕವುಂಟಾಗಿದೆ. ಸುಮಾರು 600 ವರ್ಷಗಳ ಉಜ್ವಲ ಇತಿಹಾಸದ ಪರಂಪರೆಯ ಮುಗಿತಾಯಕ್ಕೆ ನಾವು ಸಾಕ್ಷಿಗಳಾಗಿ ನಿಲ್ಲಬೇಕಾಗಿ ಬಂದುದಕ್ಕೆ ನೋವು ಹೃದಯದಲ್ಲಿ ಹೆಪ್ಪುಗಟ್ಟಿದೆ. ಇಷ್ಟು ದೀರ್ಘ ಕಾಲ ನಮ್ಮನ್ನು ಕಾಪಾಡಿದ ಪ್ರಭು ಕುಲಕ್ಕೆ ಮತ್ತು ಅದರ ಕೊನೆಯ ಕೊಂಡಿ ಜಯಚಾಮರಾಜರಿಗೆ ವಿನೀತಭಾವದಿಂದ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ.

ಧೀರೋದಾತ್ತ ಗುಣವಾಚಕಕ್ಕೆ ಅರ್ಹ ಬದುಕನ್ನು ನಡೆಸಿದ ಪ್ರಜಾಪ್ರೇಮಿ ಜಯಚಾಮರಾಜರು ಪರಮ ದೈವ ಭಕ್ತರಾಗಿ, ಧರ್ಮ ನಿಷ್ಠರಾಗಿ, ವಿದ್ವಾಂಸರಾಗಿ, ವಿನಯಶೀಲರಾಗಿ, ಸಾಹಿತ್ಯ ಕಲೆಗಳ ನಿಸ್ಸೀಮ ಉತ್ಸಾಹಕರಾಗಿ ಮೆರೆದು ಮರೆಯಾದರು. ಜಯಚಾಮರಾಜರ ನಿಧನದಿಂದ ಮೈಸೂರಿನ ಉಜ್ವಲ ಇತಿಹಾಸದ ಸಂಪುಟವೊಂದು ಪೂರ್ಣಗೊಂಡಿದೆ. ಈ ಮಹಾ ಪುರುಷನಿಗೆ ಭಾರವಾದ ಹೃದಯದಿಂದ ಶ್ರದ್ಧಾಂಜಲಿ ಸಲ್ಲಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ದಿವಂಗತ ಶ್ರೀ ಜಯಚಾಮರಾಜ ಒಡೆಯರ್ ಅವರ ನಿಧನದ ಬಗ್ಗೆ ನಾನು ಸಂತಾಪವನ್ನು ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ವಿರೋಧಪಕ್ಷದ ನಾಯಕರು ಹೇಳಿದಂತೆ ಅವರು ಬಹುಮುಖ ಪ್ರತಿಭೆಯನ್ನು ಹೊಂದಿರತಕ್ಕ ವ್ಯಕ್ತಿಗಳಾಗಿದ್ದರು. ಅಷ್ಟೇ ಅಲ್ಲ. ಇಡೀ ಕರ್ನಾಟಕದಲ್ಲಿ ಅನೇಕರು ಅವರು ಮಾಡಿದಂಥ ಜನೋಪಯುಕ್ತವಾದ ಕೆಲಸ ಕಾರ್ಯಗಳನ್ನು ಅನೇಕ ರೀತಿಯಲ್ಲಿ ಉದಹರಿಸಿ ಹೇಳಿದಂತೆ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಅವರು ಮಾಡಿದಂಥ ನಾನಾ ಕೆಲಸಕಾರ್ಯಗಳನ್ನು ಇಲ್ಲಿ ಉದಹರಿಸಿದ್ದಾರೆ. ಅವರು ಸಿಂಹಾಸನವನ್ನು ಕಳೆದುಕೊಂಡಾಗ್ಯೂ ಜನರ ಹೃದಯ ಸಿಂಹಾಸನವನ್ನು ಸಂಪಾದಿಸಿ ಅಂತಹ ಒಂದು ಸಿಂಹಾಸನದ ಮೇಲೆ ಕೂತಿರತಕ್ಕಂಥ ಒಂದು ಪರಂಪರೆ ಈ ಒಂದು ಕರ್ನಾಟಕದಲ್ಲಿದೆ. ಶ್ರೀ ಜಯಚಾಮರಾಜ ಒಡೆಯರ್ ಅವರು ಮೈಸೂರಿನ ಪ್ರದೇಶದಲ್ಲಿ ಅಷ್ಟೇ ಕೆ ಕರ್ನಾಟಕದ ಭಾಗದಲ್ಲೆಲ್ಲಾ ಎಲ್ಲರ ಹೃದಯವನ್ನು ಸೆಳೆಯುವಂತಹ ವ್ಯಕ್ತಿಗಳಾಗಿದ್ದರು. ಬಹುಶಃ ನಮ್ಮ ರಾಷ್ಟ್ರದ ಇತಿಹಾಸವನ್ನು ನೋಡಿದಾಗ ಅನೇಕ ರಾಜಮನೆತನಗಳು ಪ್ರಜಾಪ್ರಭುತ್ವದ ಹಾದಿಯಲ್ಲಿಯೂ ಕೂಡ ಅಧಿಕಾರಕ್ಕೆ ಬೆನ್ನುಹತ್ತಿ ಹೊರಟಂಥ ಅನೇಕ ಸನ್ನಿವೇಶಗಳನ್ನು ಈಗ ನಾವು ಕಾಣುತ್ತೇವೆ. ಆದರೆ ಕರ್ನಾಟಕದಲ್ಲಿ ಒಂದು ವೇಳೆ ಶ್ರೀ ಜಯಚಾಮರಾಜ ಒಡೆಯರ್ ಅವರು ನಿಜವಾಗಿಯೂ ಮನಸ್ಸು ಮಾಡಿದ್ದರೆ ಈ ಒಂದು ಪ್ರಜಾಪ್ರಭುತ್ವದಲ್ಲಿ ಅವರು ಅಧಿಕಾರ ಬೇಕು ಎಂಬತಕ್ಕ ಆಶೆಯನ್ನು ವ್ಯಕ್ತಪಡಿಸಿದ್ದಿದ್ದರೆ ಬಹುಶಃ ಅವರು ಅಂತಹ ವಿಷಯಗಳಿಗೆ ಗಮನ ಕೊಟ್ಟಿದ್ದಿದ್ದರೆ, ನಿಜವಾಗಿಯೂ ಅವರಿಗೆ ಈ ರಾಜ್ಯದ ಮುಖ್ಯಮಂತ್ರಿಸ್ಥಾನ ಯಾವತ್ತಾದರೂ ಲಭ್ಯವಾಗುತ್ತಿತ್ತು. ಏಕೆಂದರೆ ಅವರ ಮೇಲೆ ಜನರ ವಿಶ್ವಾಸ ಬಹಳವಾಗಿತ್ತು. ನಮ್ಮಲ್ಲಿ ಯಾರೂ ಇದುವರೆಗೆ ರಾಜಷಾಹಿಗೆ ವಿರೋಧ ಮಾಡಿದವರು ಇಲ್ಲ. ಮೈಸೂರಿನ ರಾಜಮನೆತನಕ್ಕೆ ವಿರೋಧ ಕೂಗಲು ಇದುವರೆಗೆ ಯಾರಿಗೂ ಸಾಧ್ಯವಾಗಿಲ್ಲ. ನಾನು ಮೈಸೂರಿನಲ್ಲಿ ನಡೆಯುತ್ತಿದ್ದ ಜಂಬೂಸವಾರಿಯ ಬಗ್ಗೆ ಹಿಂದೆ ಒಂದುಸಾರಿ ವಿರೋಧ ಮಾಡಿದಾಗ, ನನ್ನನ್ನು ಆಗ ಜೈಲಿಗೆ ಹಾಕಿದ್ದ ಪ್ರಸಂಗವನ್ನು ಇಲ್ಲಿ ಮತ್ತೆ ಹೇಳಬೇಕಾಗಿಲ್ಲ. ಆಗ ಜನ ಸ್ವಲ್ಪಮಟ್ಟಿಗೆ ಸಿಟ್ಟು ಆದರು. ಆದರೆ ಶ್ರೀ ಜಯಚಾಮರಾಜ ಒಡೆಯರ್ ಅವರು ಸಿಟ್ಟಾಗಲಿಲ್ಲ. ಅಂದಿನಿಂದಲೂ ಕೂಡ ಪ್ರಜಾಪ್ರಭುತ್ವದಲ್ಲಿ ಸಂಪೂರ್ಣವಾಗಿ ನಂಬಿಕೆಯನ್ನು ಇಟ್ಟುಕೊಂಡು ಅವರಿಗೆ ಜನರು ಕೊಟ್ಟಿದ್ದಂಥ ವಿಶ್ವಾಸವನ್ನು ಹಾಗೆಯೇ ರಕ್ಷಿಸಿಕೊಂಡು ಬಂದಂಥ ವ್ಯಕ್ತಿಗಳಾಗಿ ಶ್ರೀ ಜಯಚಾಮರಾಜ ಒಡೆಯರ್ ಅವರು ಇದ್ದರು. ಅಂತಹವರು ಆಗ ಸರ್ಕಾರದ ಅಧಿಕಾರಕ್ಕೆ ಅವರ ಆಗಿನ ಸಮಯವನ್ನು ಬಳಸಿಕೊಂಡಿದ್ದಿದ್ದರೆ ಇಡೀ ಕರ್ನಾಟಕದಲ್ಲಿ ಎಲ್ಲಾ ಸ್ಥಾನಮಾನಗಳನ್ನು ಅಲಂಕರಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಇವತ್ತು ಅವರ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಕಾಣಬೇಕಾದರೆ, ಕರ್ನಾಟಕದ ಜನ ಅವರ ಬಗ್ಗೆ ಯಾವರೀತಿಯಲ್ಲಿ ಒಂದು ದೊಡ್ಡ

(ಶ್ರೀ ಕಾಗೋಡು ತಿಮ್ಮಪ್ಪ)

ಪ್ರಮಾಣದ ವಿಶ್ವಾಸ, ನಂಬಿಕೆ, ಗೌರವವನ್ನು ಇಡುತ್ತಿದ್ದರೋ ಅದನ್ನು ಕೊನೆಯವರೆಗೂ ಹಾಗೆಯೇ ಉಳಿಸಿಕೊಂಡು ಯಾವುದೇ ರಾಜಕಾರಣಕ್ಕೆ ಕೈಹಾಕದೆ ಜನರ ಗೌರವವನ್ನು ಎಂದಿನಂತೆಯೇ ಉಳಿಸಿಕೊಂಡು ನಮ್ಮನ್ನು ಅಗಲಿದ್ದಾರೆ. ಮೊದಲಿನಿಂದಲೂ ಮೈಸೂರಿನ ರಾಜಮನೆತನದವರು ಅದರಲ್ಲಿಯೂ ಶ್ರೀ ಜಯಚಾಮರಾಜ ಒಡೆಯರ್ ಅವರು ನಮ್ಮ ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಕಾಣಿಕೆಯನ್ನು ಕೊಟ್ಟಿದ್ದಾರೆಂದು ಹೇಳಬಹುದು. ಅನೇಕ ಸರ್ಕಾರಗಳು ಅವರ ಹಿಡಿತದಲ್ಲಿದ್ದರೂ, ರಾಜಷಾಹಿಯಿಂದ ಅಂತಹ ಒಂದು ಹಿಡಿತವನ್ನು ತಪ್ಪಿಸಿಕೊಂಡರು. ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಮೈಸೂರಿನ ಮನೆತನದ ರಾಜಕಾರಣದ ಅಧಿಕಾರಕ್ಕೆ ಅವರು ಎಂದೂ ಪ್ರಯತ್ನಪಟ್ಟಿರಲಿಲ್ಲ. ಇದು ಒಂದು ಅವರ ದೊಡ್ಡ ಕಾಣಿಕೆ ನಮ್ಮ ದೇಶಕ್ಕೆ ಎಂಬುದಾಗಿ ನಾವು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕು. ಮಹಾತ್ಮ ಗಾಂಧಿಯವರ ನಂತರ ಒಂದ ದೊಡ್ಡ ಅಧಿಕಾರದ ಸ್ಥಾನಕ್ಕೆ ಅವರು ಪ್ರಯತ್ನಪಟ್ಟಿದ್ದರೆ ಒಂದು ದೊಡ್ಡ ಹಿರಿಯ ಅಧಿಕಾರಕ್ಕೆ ಬರುವ ಒಂದು ಅರ್ಹತೆಯನ್ನು ಅವರು ಪಡೆದಿದ್ದರು. ಅರಸರಾಗಿ, ಒಡೆಯರಾಗಿ, ಜನಾನುರಾಗಿಯಾಗಿ ಪ್ರಖ್ಯಾತರಾಗಿದ್ದರೂ ಕೊನೆಯಲ್ಲಿ ಮಾನಸಿಕ ದುರ್ಬಲತೆ ಅವರಿಗೆ ಬಂತು. ಇದರಿಂದ ಭಾರತದಲ್ಲಿಯೇ ಇಡೀ ಜನಾಂಗದಲ್ಲಿಯೂ ಅದೇ ರೀತಿಯಾದಂಥ ದುರ್ಬಲತೆ ಹೆಚ್ಚಾಯಿತು. ಇಂತಹ ಒಂದು ದುರ್ಬಲತೆಯಿಂದ ದುರ್ಲಾಭ ಪಡೆದವರು ಕೆಲವರು ಇದ್ದಾರೆ. ಕೆಲವರು ಅವರಿಂದ ದೂರ ಇದ್ದವರೂ ಇದ್ದಾರೆ. ಆ ರೀತಿಯಾಗಿ ದೂರ ಇದ್ದವರು ಎಷ್ಟೋ ಸಾರಿ ಶ್ರೀ ಜಯಚಾಮರಾಜ ಒಡೆಯರ್ ಅವರ ಪ್ರಮುಖ ಪ್ರತಿಭಾ ವ್ಯಕ್ತಿತ್ವದಿಂದ ಹೆಚ್ಚಿಗೆ ಲಾಭ ಪಡೆದವರು ಇದ್ದಾರೆ. ಅಂತಹವರು ಅವರ ಮನೆತನದಿಂದ, ಅವರ ಇತಿಹಾಸದಿಂದ ಹಲವಾರು ರೀತಿ ಕಾಣಿಕೆಗಳನ್ನು ಪಡೆದಿದ್ದಾರೆ. ಮೈಸೂರು ಅರಸರಲ್ಲಿ ಒಂದು ವೈಶಿಷ್ಟ್ಯ ಗುಣವೆಂದರೆ, ಯಾವುದೇ ಒಂದು ವರ್ಗದ ಜನರನ್ನು ಬಹಳ ಹತ್ತಿರದಲ್ಲಿ ಇಟ್ಟುಕೊಂಡಿರಲಿಲ್ಲ. ಎಲ್ಲ ಕೋಮುಗಳನ್ನೂ, ಎಲ್ಲ ಜನಾಂಗಗಳನ್ನೂ ಬಹಳ ಸಮೀಪದಲ್ಲಿಯೇ ಇಟ್ಟುಕೊಂಡು ಅವರನ್ನು ಚೆನ್ನಾಗಿ ಬೆಳೆಸಿಕೊಂಡು, ಪ್ರೋತ್ಸಾಹಿಸಿಕೊಂಡು, ಉಳಿಸಿಕೊಂಡು ಬಂದಂಥ ಅರಸರಾಗಿದ್ದರು. ಶ್ರೀ ಜಯಚಾಮರಾಜ ಒಡೆಯರ್ ಅವರಲ್ಲಿ ಈ ಒಂದು ಗುಣ ವಿಶೇಷವಾಗಿತ್ತು. ಅತ್ಯಂತ ಶ್ರೇಷ್ಠ ರಾಜರೆಂದೆನಿಸಿಕೊಂಡಿದ್ದರು. ಬಹುಶಃ ಮೈಸೂರು ರಾಜ್ಯದ ಮನೆತನದವರು ಸಾಮಾಜಿಕ ಕ್ಷೇತ್ರದಲ್ಲಿ ಹೆಚ್ಚಿಗೆ ದುಡಿದಿದ್ದಾರೆ. ಅದರಲ್ಲಿಯೂ ಶ್ರೀ ಜಯಚಾಮರಾಜ ಒಡೆಯರ್ ಅವರು ಸಮಾಜದಲ್ಲಿ ಒಂದು ಸಮಾನತೆಯನ್ನು ಸ್ಥಾಪನೆಮಾಡುವುದಕ್ಕೆ ಪಟ್ಟಂಥ ಪರಿಶ್ರಮ ಬೇರೆ ಯಾವ ರಾಜರೂ ಪಟ್ಟಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಹುದು. ಆದ್ದರಿಂದ ಇವತ್ತು ಕೇವಲ ಅವರ ನಿಧನದಿಂದ ಮೈಸೂರಿನ ಯದುವಂಶದ ರಾಜಷಾಹಿ ಮುಕ್ತಾಯಗೊಂಡಿತು. ನಿಜವಾಗಿಯೂ ಅವರು ಜನರಿಂದ ಸಂಪೂರ್ಣವಾಗಿ ದೂರವಾಗಿಲ್ಲ. ಈ ಸದನದಲ್ಲಿ ಅವರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಅವರ ನಿಧನದ ಬಗ್ಗೆ ನಾನು ಸಂತಾಪವನ್ನು ಸೂಚಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

1-30 P. M.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷಣಿಯವರೇ, ಯದುವಂಶಕ್ಕೆ ಸೇರಿದ ನಮ್ಮ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರವರ ನಿಧನದ ಬಗ್ಗೆ ನಾನೂ ಮತ್ತು ನನ್ನ ಪಕ್ಷದವರೂ, ಈ ಸಂತಾಪಸೂಚಕ ನಿರ್ಣಯಕ್ಕೆ ಬೆಂಬಲ ಸೂಚಿಸುತ್ತೇವೆ. ಈ ರಾಜವಂಶೀಯರ ಬಗ್ಗೆ ನಮಗೂ ಬಹಳ ಗೌರವವಿತ್ತು. ನಾನು ಏತಕ್ಕಾಗಿ ಈ ಮಾತುಗಳನ್ನು ಹೇಳುತ್ತಿದ್ದೇನೆಂದರೆ ಹಿಂದೆ ಸ್ವಾತಂತ್ರ್ಯಕ್ಕೆ ಹೋರಾಟ ನಡೆಯುತ್ತಿದ್ದ ಕಾಲಕ್ಕೆ, ಈ ರಾಜತ್ವ, ನಿರಂಕುಶಾಡಳಿತದ ವಿರುದ್ಧ ಹೋರಾಟ ನಡೆಸಿದವರಲ್ಲಿ ನಾವೂ ಸೇರಿದ್ದೇವೆ. ಆ ಕಾಲಕ್ಕೆ ನಾನೂ ಮತ್ತು ನನ್ನ ಪಕ್ಷದವರು ಈ ಹೋರಾಟದಲ್ಲಿ ಭಾಗವಹಿಸಿ ಅಪಾರ ತ್ಯಾಗಮಾಡಿದ್ದುಂಟು. ಆದರೆ ಆ ಕಾಲಕ್ಕೆ ನಾವು ಯಾವೊಬ್ಬ ವ್ಯಕ್ತಿಯ ಬಗ್ಗೆ ಆಗಲೀ ಅಥವಾ ಒಬ್ಬ ಮಹಾರಾಜರ ಬಗ್ಗೆಯಾಗಲಿ ಬೆರಳನ್ನು ತೋರಿಸಿ ಹೋರಾಟಮಾಡಲಿಲ್ಲ. ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಆಡಳಿತ ಹೋಗಬೇಕು, ನಿರಂಕುಶಾಧಿಕಾರ ಹೋಗಬೇಕೆಂದು ನಾವು ಆ ಹೋರಾಟವನ್ನು ನಡೆಸಿದೆವೇ ವಿನಾ ಯಾವ ವ್ಯಕ್ತಿಯ ಬಗ್ಗೆ ಅಥವಾ ಅಧಿಕಾರಿಯ ಬಗ್ಗೆ ನಡೆಸಲಿಲ್ಲ. ಈಗಾಗಲೆ ನನ್ನ ಗೆಳೆಯರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಇತರೇ ಸ್ನೇಹಿತರು ಹೇಳಿದಹಾಗೆ ರಾಜಮನೆತನದವರು ಅಧಿಕಾರ ದಾಹಕ್ಕೆ ಅಂಟಿಕೊಳ್ಳದೆ, ಅದಕ್ಕೆ ಮನಸೋಲದೆ ಕರ್ಣಾಟಕದಲ್ಲಿ ಪ್ರಪ್ರಥಮ

ವಾಗಿ ಪ್ರಜಾಪ್ರಭುತ್ವ ಪದ್ಧತಿಯ ಪ್ರಕಾರ ಆಡಳಿತ ನಡೆಯಬೇಕೆಂದು ಮಾರ್ಗಹಾಕಿಕೊಟ್ಟಿದ್ದಾರೆ. ಈ ಒಂದು ಕಾರಣದಿಂದ ಇವರ ಬಗ್ಗೆ ನಮ್ಮ ರಾಜ್ಯದಲ್ಲಿ ಅಲ್ಲದೆ ಎಲ್ಲಕಡೆಯೂ ಇವರಿಗೆ ಹೆಚ್ಚಿನ ಪ್ರೇಮಾದರಣೆಗಳನ್ನು ತೋರಿಸುವುದಕ್ಕೆ ಅವಕಾಶವಾಯಿತು ಎನ್ನಬಹುದು. ರಾಜರುಗಳಬಗ್ಗೆ ಚರಿತ್ರೆ ಬೇರೆ ರೀತಿಯಲ್ಲಿ ಹೇಳುತ್ತದೆ. ಹೈದರಾಬಾದಿನ ನೈಜಾಮರೂ ಮತ್ತು ತಿರುವಾಂಕೂರಿನ ಮಹಾರಾಜರೂ ಮತ್ತು ಇನ್ನು ಕೆಲವರು ಬ್ರಿಟಿಷ್ ಸಾಮ್ರಾಜ್ಯ ಷಾಹಿಯ ನೌಕರರಾಜ್ಯಗಳಾಗಿದ್ದು ಕೊಂಡು ಕಾಲತಳ್ಳುತ್ತಿದ್ದರು. ಅವರೆಲ್ಲರೂ ಆಕಾಲಕ್ಕೆ ಪ್ರಾರಂಭವಾಗಿದ್ದ ಸ್ವಾತಂತ್ರ್ಯ ಹೋರಾಟವನ್ನು ಅದುಮಲು—ಅದನ್ನು ತುಳಿಯಲು ಅನೇಕ ರೀತಿಯಲ್ಲಿ ಪ್ರಯತ್ನ ಪಟ್ಟರು. ಆಕಾರಣಕ್ಕಾಗಿ ಅಲ್ಲೆಲ್ಲಾ ನೂರಾರೂ ಜನರ ತ್ಯಾಗ ಬಲಿದಾನಗಳಾಗಬೇಕಾಯಿತು. ಆದರೆ ಮೈಸೂರು ರಾಜ್ಯದಲ್ಲಿ ಹೋರಾಟ ನಡೆದಾಗ್ಯೂ ಅಷ್ಟೊಂದು ದಬ್ಬಾಳಿಕೆ ದೌರ್ಜನ್ಯಗಳು ನಡೆಯಲಿಲ್ಲ. ಇಲ್ಲಿಯ ರಾಜಮನೆತನದವರು ಪ್ರಜೆಗಳ ಆಸೆಗೆ ಹೊಂದಿಕೊಂಡು ಅವರಿಗೆ ಅನುಕೂಲವಾದ ರೀತಿಯಲ್ಲಿ ಆಡಳಿತ ನಡೆಸುವುದಕ್ಕೆ ಅನುವಾದರು. ಇವರು ಅಧಿಕಾರಷಾಹಿಗೆ ಅಂಟಿಕೊಳ್ಳಲಿಲ್ಲ. ಹಿಂದೆ ಇದೇ ರಾಜ್ಯದಲ್ಲಿ ಮತ್ತು ಸುತ್ತಮುತ್ತಲಿದ್ದ ಎಲ್ಲ ಕನ್ನಡಿಗರೂ ಒಟ್ಟುಗೂಡಿ ಕರ್ಣಾಟಕ ರಾಜ್ಯಸ್ಥಾಪನೆ ಮಾಡಬೇಕೆಂದು ಹೋರಟಾಗ ಇಲ್ಲಿಯ ಕೆಲವು ಜನರು ಅದಕ್ಕೆ ವಿರುದ್ಧವಾಗಿದ್ದಂತೆ ಕಂಡಾಗಲೂ ಕೂಡ ಜಯಚಾಮರಾಜ ಒಡೆಯರವರು ಕರ್ಣಾಟಕರಾಜ್ಯ ಸ್ಥಾಪನೆಯಾಗತಕ್ಕ ಬಗ್ಗೆಯೂ ತಮ್ಮ ಬೆಂಬಲವನ್ನು ತೋರಿಸಿ ತಮ್ಮ ಸೌಜನ್ಯತೆಯನ್ನು ವ್ಯಕ್ತಪಡಿಸಿರುತ್ತಾರೆ. ಇಂಥಾ ಕೆಲವು ದೊಡ್ಡ ಗುಣಗಳು ಅವರಲ್ಲಿದ್ದವು.

ಇವರಲ್ಲಿದ್ದ ಇನ್ನೂ ಅನೇಕ ಗುಣಗಳ ಬಗ್ಗೆ ಈಗಾಗಲೇ ನಮ್ಮ ಸಭಾನಾಯಕರೂ ಮತ್ತು ವಿರೋಧಪಕ್ಷದ ನಾಯಕರೂ ಹೇಳಿದ್ದಾರೆ. ಅಷ್ಟೇ ಅಲ್ಲದೆ ಜಯಚಾಮರಾಜ ಒಡೆಯರ್‌ರವರು ಬಹಳ ಆಳವಾಗಿ ಓದಿದ್ದಂಥ ವ್ಯಕ್ತಿಗಳು. ಇವರು ಅನೇಕ ಸಾಹಿತ್ಯಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ ಬಹಳ ಪ್ರಾಮುಖ್ಯವಾದವುಗಳೆಂದರೆ ತತ್ವಜ್ಞಾನಕ್ಕೆ ಸಂಬಂಧಪಟ್ಟವುಗಳು. ಈ ತತ್ವಗಳಲ್ಲಿ ನಾವು ಅನೇಕ ಅಂಶಗಳನ್ನು ಒಪ್ಪದಿದ್ದರೂ ಇವರು ಈ ತತ್ವಜ್ಞಾನವನ್ನು ನಮ್ಮ ದೇಶದಲ್ಲೇ ಅಲ್ಲದೇ ಅನೇಕ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಸಂಚಾರಮಾಡಿ ಅಲ್ಲಿಯೂ ಅದನ್ನು ಪ್ರಸಾರಮಾಡಿದ್ದಾರೆ. ಇದಕ್ಕಾಗಿ ಇವರಿಗೆ ಪ್ರಪಂಚದ ನಾನಾಭಾಗಗಳಲ್ಲಿ ಒಂದು ಹೆಚ್ಚಿನ ಗೌರವದೊರೆಯಲು ಕಾರಣವಾಯಿತು. ಇಂಥ ಒಬ್ಬರು ಘನವಂತ ವ್ಯಕ್ತಿ ನಮ್ಮನ್ನು ಬಿಟ್ಟು ಅಗಲಿದ್ದು ಕರ್ಣಾಟಕದವರ ದುರ್ದೈವ. ಅವರ ಅಗಲಿಕೆಯಿಂದ ನಮಗೆಲ್ಲಾ ಬಹಳ ನಷ್ಟವಾಗಿದೆಯೆಂದು ಹೇಳಿ ಅವರಿಗೆ ನನ್ನ ಶ್ರದ್ಧಾಂಜಲಿಯನ್ನರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ,

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಸನ್ಮಾನ್ಯ ಅಧ್ಯಕ್ಷಿಣಿಯರೇ, ಇಂದು ನಮ್ಮ ಮೈಸೂರು ರಾಜ್ಯದ ಮಹಾರಾಜರಾಗಿದ್ದವರೆಲ್ಲರ ಬಗ್ಗೆ ನಮಗೂ ನಮ್ಮ ರಾಜ್ಯದ ಎಲ್ಲ ಪ್ರಜೆಗಳಿಗೂ ಅಪಾರವಾದ ಪ್ರೀತಿ ಗೌರವ ವಿಶ್ವಾಸಗಳಿದ್ದವು ಎಂಬುದನ್ನು ಸೂಚಿಸುತ್ತಾ, ಮೊನ್ನೆ ಅಗಲಿದ ಶ್ರೀ ಜಯಚಾಮರಾಜ ಒಡೆಯರ ಆತ್ಮಕ್ಕೆ ಶಾಂತಿದೊರೆಯಲಿ ಎಂದು ಹೇಳತಕ್ಕ ಕಾಲದಲ್ಲಿ ನಾವು ನಮ್ಮ ಅಪಾರ ವ್ಯಸನವನ್ನು ಸೂಚಿಸತಕ್ಕದ್ದು ಒಂದು ಸಂಪ್ರದಾಯವಾಗಿದ್ದರೂ ಇಂದು ಇಲ್ಲಿ ಇದನ್ನು ನಡೆಸುತ್ತಿರುವುದರಲ್ಲಿ ಒಂದು ಔಚಿತ್ಯಕೂಡ ಇದೆ. ಅದೇನೆಂದರೆ ಇಡೀ ಭರತಖಂಡದಲ್ಲಿ ಪ್ರಜಾಪ್ರಭುತ್ವ ಪದ್ಧತಿಯ ಮೇಲೆ ಆಡಳಿತವನ್ನು ಪ್ರಾರಂಭಮಾಡಿದ ರಾಜ್ಯಗಳಲ್ಲಿ ಇದರ ಆದ್ಯತೆ ನಮ್ಮ ಮೈಸೂರಿಗೆ ಸೇರಬೇಕಾಗಿರುತ್ತದೆ. ಭಾರತದಲ್ಲೇ ಹಿಂದೆ ಎಲ್ಲಾ ಪ್ರಜಾಪ್ರಭುತ್ವಾಡಳಿತ ಪದ್ಧತಿಯ ಮೇಲೆ ಆಡಳಿತ ನಡೆಯದಿದ್ದಂಥ ಕಾಲದಲ್ಲೂ-ಆಗ ಇಲ್ಲಿ ದಿವಾನರಾಗಿದ್ದ ರಂಗಾಚಾರ್ಲು ಅವರು ಇಲ್ಲಿ ಪ್ರಜಾಪ್ರಭುತ್ವ ಆಡಳಿತವನ್ನು ಸ್ಥಾಪಿಸಿದರು. ಅಂದರೆ ಆ ಕಾಲಕ್ಕೇ ನಮ್ಮ ರಾಜವಂಶೀಯರು ಜನರ ಆಸೆಆಕಾಂಕ್ಷೆಗಳಿಗೆ ಕಿವಿಗೊಟ್ಟು ಇಲ್ಲಿ ಪ್ರಜಾಪ್ರಭುತ್ವಾಡಳಿತವನ್ನು ಸ್ಥಾಪಿಸಿದ್ದರು. ಅಂಥ ರಾಜವಂಶಕ್ಕೆ ಸೇರಿದವರಿಗೆ ನಾವಿಂದಿವಸ ಇಲ್ಲಿ ನಮ್ಮ ಸಭೆಯಲ್ಲಿ ಕೃತಜ್ಞತೆಯನ್ನು ತೋರಿಸಬೇಕಾದ್ದು ನಮೆಲ್ಲರ ಆದ್ಯ ಕರ್ತವ್ಯ.

ನಮ್ಮನ್ನಗಲಿದ ಶ್ರೀ ಜಯಚಾಮರಾಜ ಒಡೆಯರವರು ಬಹಳ ಬುದ್ಧಿವಂತರು. ಅವರು ಅಭ್ಯಾಸಮಾಡುತ್ತಿದ್ದ ಕಾಲದಲ್ಲಿ ಅಂದರೆ ಅವರು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತಿದ್ದ ಕಾಲಕ್ಕೆ ಕೀರ್ತಿಶೇಷರಾಗಿರತಕ್ಕ ಮಾನ್ಯ ಸಂಪದ್ಗಿರಿರಾಯರು ಎಗ್ಜಾಮಿನರಾಗಿದ್ದರು. ಅವರು ಜಯಚಾಮರಾಜರ ಪ್ರಶ್ನೆಪತ್ರಿಕೆಗಳನ್ನು ಪರಿಶೀಲಿಸಿದಾಗ ಅವರಿಗೆ ನೂರಕ್ಕೆ 95 ನಂಬರುಗಳನ್ನು ಕೊಟ್ಟಿದ್ದರು: ಕಾರಣ ಅವರು ಬರೆದಿದ್ದ ಉತ್ತರಗಳು ಅಷ್ಟು ಬೆಲೆಯುಳ್ಳವಾಗಿದ್ದವು. ಆದಾಗ್ಯೂ ಆ ಕಾಲದಲ್ಲಿ ನಾವು ಕೆಲವರು ಆ ಬಗ್ಗೆ ಎಗ್ಜಾಮಿನರು ಅವರಿಗೆ ಮಹಾರಾಜರು ಎಂದು ಹೇಳಿ

(ಶ್ರೀ ಟಿ. ಆರ್. ಶಾಮಣ್ಣ)

ಹೆಚ್ಚಿಗೆ ನಂಬರುಗಳನ್ನು ಕೊಟ್ಟಿದ್ದಾರೆಂಬ ಕೂಗೆಬ್ಬಿಸಿದಾಗ ಅವರು ಬರೆದಿದ್ದ ಉತ್ತರಗಳನ್ನು ಬಹಿರಂಗಮಾಡಿದರು. ನೋಡಿದ್ದರಲ್ಲಿ ಅವರ ಉತ್ತರ ಅದರು ಎಂಥ ಪಾಂಡಿತ್ಯವುಳ್ಳ ಪ್ರಾಜ್ಞರು ಎಂಬುದನ್ನು ಎತ್ತಿತೋರುತ್ತಿತ್ತು. ಇವರ ಶೈಲಿಯಾದರೋ ಬಹಳ ಮುದ್ದಾದ ಶೈಲಿ, ಅಂದವಾದ ಅಕ್ಷರಗಳು. ಆದರೆ ಅನೇಕರು ಹುಟ್ಟುತ್ತಾರೆ-ಸಾಯುತ್ತಾರೆ. ಆದರೆ ಈಗಾಗಲೇ ಮಾನ್ಯ ಸಭಾನಾಯಕರೂ ಮತ್ತು ವಿರೋಧಪಕ್ಷದ ನಾಯಕರೂ ಹೇಳಿದಂತೆ ಅನೇಕರಿಗೆ ಅವರಲ್ಲಿ ಬಹಳ ಭಕ್ತಿವಿಶ್ವಾಸಗಳಿದ್ದವು. ನಾವು ಈ ಮಾತುಗಳನ್ನು ಕೇವಲ ಉಪಚಾರಕ್ಕಾಗಿ ಹೇಳುತ್ತಿಲ್ಲ. ಹಿಂದೆ ಅವರು ನಿಧನರಾದ ಸಂದರ್ಭದಲ್ಲಿ ಜನತೆಯನ್ನು ಎಷ್ಟರಮಟ್ಟಿಗೆ ಸೆಳೆದಿದ್ದರೆಂಬುದಕ್ಕೆ ಒಂದು ನಿದರ್ಶನ ಎಂದರೆ—ಬೆಂಗಳೂರಿನ ನಾನಾ ಮೂಲೆಮೂಲೆಗಳಿಂದ ಜನರು ಬಂದರು. ಬಡಬಗ್ಗರಿಗೆ ಅನ್ನಶಾಂತಿಯನ್ನು ನಡೆಸಿದಾಗ ಸುಮಾರು ರಾತ್ರಿ 11 ಗಂಟೆಯವರೆಗೂ ಊಟಗಳು ನಡೆದು ಸಹಸ್ರಾರು ಜನರು ಬಂದಿದ್ದರು. ಕೂಲಿಮಾಡತಕ್ಕ ಜನರೂ ಕೂಡ ಸೇರಿ ಸುಮಾರು 15 ಪಲ್ಲ ಅಕ್ಕಿಯನ್ನು ಶೇಖರಣೆಮಾಡಿ ಜನರಿಗೆ ಅನ್ನ ಹಾಕಿದರು. ಅವರು ಎಷ್ಟು ಅಪಾರ ಗೌರವ ಸಂಪಾದಿಸಿದ್ದರೆಂಬುದಕ್ಕೆ ನಿದರ್ಶನಗಳಿವೆ ಶ್ರೀ ಜಯಚಾಮರಾಜ ಒಡೆಯರು ಕೇವಲ ಮೈಸೂರಿಗೆ ಮಾತ್ರ ಮಹಾರಾಜರಾಗಿರಲಿಲ್ಲ, ಕರ್ನಾಟಕದ ಅನೇಕ ಭಾಗಗಳು ವಿಲೀನವಾಗುವುದಕ್ಕೆ ಮುಂಚೆ ಉತ್ತರ ಕರ್ನಾಟಕದ ಕಡೆ ಅಥವ ಬೇರೆ ಕಡೆ ಮಹಾರಾಜರು ಹೋದಾಗ ಅಲ್ಲಿನವರು ಮಹಾರಾಜರಿಗೆ ಅನೇಕ ವಿಧವಾಗಿ ಗೌರವವನ್ನು ಸಲ್ಲಿಸುತ್ತಿದ್ದರು. ತಮಿಳುನಾಡಿಗೆ ಪದೇ ಪದೇ ಅವರು ಯಾತ್ರೆ ಹೋದಾಗ ಅಲ್ಲಿನವರು ಮಹಾರಾಜರಿಗೆ ಕೈ ಎತ್ತಿ ಮುಗಿಯುತ್ತಿದ್ದರು. ಇದನ್ನು ನಾವು ನೋಡಿದ್ದೇವೆ. ದಸರಾ ಮೈಸೂರಿನಲ್ಲಿ ನಡೆದರೆ ಕೋಟ್ಯಾಂತರ ಜನರು ಬೇರೆ ಬೇರೆ ಕಡೆಗಳಿಂದ ಬಂದು ಆ ಉತ್ಸವದಲ್ಲಿ ಭಾಗಿಯಾಗುತ್ತಿದ್ದರು. ಸಾಮಾನ್ಯವಾಗಿ ಅನೇಕರು ಹುಟ್ಟುವರು ಮತ್ತು ಸಾಯುವರು. ಆದರೆ ಅವರು ಸತ್ತ ಮೇಲೆ ಕೂಡ ಸ್ಮರಿಸಿಕೊಳ್ಳಬೇಕಾದರೆ ಜನರಲ್ಲಿ ಗೌರವಗಳಿಸಿರಬೇಕು. ನಮ್ಮ ಮಹಾರಾಜರು ಅಂಥವರು ಅವರ ಮನೆತನದವರಿಗೆ ಅವರ ಮರಣದಿಂದ ಉಂಟಾಗಿರುವ ಅಪಾರವಾದ ದುಃಖವನ್ನು ಸಹಿಸಿಕೊಳ್ಳಲು ಭಗವಂತನು ಶಕ್ತಿ ಕೊಡಲಿ. ಬಹಳ ದಿನಗಳ ನಂತರ ಇಲ್ಲಿ ಅದನ್ನು ಹೇಳಬೇಕಾದ ಸಂದರ್ಭ ಬಂದರೂ ಕೂಡ ಇದರಿಂದ ನಾವು ಒಂದು ಪಾಠ ಕಲಿಯಬೇಕಾಗಿದೆ. ರಾಜಕಾರಣಿಗಳು ಮತ್ತು ಅಧಿಕಾರದಲ್ಲಿರುವವರು ಜನರ ವಿಶ್ವಾಸವನ್ನು ಸಂಪಾದಿಸಲು ಪ್ರಯತ್ನಪಡಬೇಕು ಎಂಬುದೆ ಅದು. ಇದುವರೆಗೆ ಎಷ್ಟೋ ಜನ ಮಂತ್ರಿಗಳು ಅಧಿಕಾರದಲ್ಲಿದ್ದು ಹೋಗಿರುತ್ತಾರೆ. ಆದರೆ ಅವರು ಬೀದಿಯಲ್ಲಿ ಹೋದರೆ ಅವರನ್ನು ನಿಮ್ಮದು ಯಾವ ಊರು ಎಂದು ಕೇಳುವವರು ಕೂಡ ಇಲ್ಲ. ಆದರೆ ಶ್ರೀ ಜಯಚಾಮರಾಜ ಒಡೆಯರ್‌ರವರು ಎಲ್ಲಾದರೂ ಹೋದಾಗ ಸಣ್ಣ ಮಕ್ಕಳಿಂದ ಹಿಡಿದು ಹಿರಿಯರವರೆಗೂ ಎಲ್ಲರೂ ದೈವಕ್ಕೆ ಸೂಚಿಸುವಂತೆ ಭಕ್ತಿ ಸೂಚಿಸಿ ಗೌರವ ಸಲ್ಲಿಸುತ್ತಿದ್ದರು. ಅಂಥ ಗೌರವವನ್ನು ರಾಜಕಾರಣಿಗಳು ಸಂಪಾದಿಸಿದರೆ ಅವರನ್ನು ಜನರು ನೆನೆಸುವರು ಮತ್ತು ಅವರ ಜನ್ಮ ಸಾರ್ಥಕವಾಗುವುದು. ನಮ್ಮ ಶ್ರೀಮನ್ಮಹಾರಾಜರವರಿಗೆ ಎಲ್ಲ ಧರ್ಮಗಳಲ್ಲೂ ಸಹ ಅಪಾರವಾದ ಗೌರವವಿತ್ತು. ಅವರು ಶೈವಧರ್ಮ, ವೈಷ್ಣ ಧರ್ಮ, ಕ್ರಿಶ್ಚಿಯನ್ನರ ಧರ್ಮ, ಮುಸ್ಲಿಮರ ಧರ್ಮ ಮುಂತಾದ ಎಲ್ಲ ಧರ್ಮಗಳನ್ನೂ ಕೂಡ ಗೌರವಿಸುತ್ತಿದ್ದರು, ಎಲ್ಲವನ್ನೂ ಸಮನ್ವಯ ಮಾಡಿಕೊಂಡು ನಿಷ್ಠೆಯಿಂದ ಮತ್ತು ಶ್ರದ್ಧೆಯಿಂದ ನಡೆದುಕೊಳ್ಳುತ್ತಿದ್ದರು. ಇಂಥ ವ್ಯಕ್ತಿಗಳು ಹುಟ್ಟುವುದು ವಿರಳ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲಿ ಮತ್ತು ಅವರ ಕುಟುಂಬದವರಿಗುಂಟಾಗಿರುವ ಅಪಾರ ದುಃಖವನ್ನು ಸಹಿಸಿಕೊಳ್ಳಲು ಶಕ್ತಿ ಕೊಡಲಿ ಎಂದು ಹಾರೈಸಿ ನನಗೆ ಈ ಎರಡು ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. B. SAYANAK (Belgaum).—[Spoke in Marathi]

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು ಮತ್ತು ಅನೇಕ ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯಗಳನು ಅನುಮೋದನೆ ಮಾಡುತ್ತಾ ಅದರ ಜೊತೆಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಯಾವುದೇ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ವ್ಯಕ್ತಮಾಡಿದರೂ ಕೂಡ ಈಗಾಗಲೆ ಹೇಳಿರುವ ವಿಷಯಗಳನ್ನು ಬಿಟ್ಟರೆ ಬೇರೆ ಇಲ್ಲ. ಒಂದು ಅಂಶವನ್ನು ಮನುಷ್ಯ ಗಮನಿಸಬೇಕು. ಶ್ರೀ ಜಯಚಾಮರಾಜ ಒಡೆಯರು ಮಹಾರಾಜರಾಗಬೇಕೆಂದು ಹುಟ್ಟಿರಲಿಲ್ಲ, ಅವರ ಅದೃಷ್ಟದಿಂದ ಅವರಿಗೆ ರಾಜಪದವಿ ದೊರೆಯಿತು. ಕೆಲವು ವೇಳೆ ಅಭಿಪ್ರಾಯ ಭೇದ ಬಂದಾಗ ಹೊಸ ವ್ಯವಸ್ಥೆಗೆ

ಹೊಂದಿಕೊಂಡು ಹೋಗುವುದು ಕಷ್ಟವಾಗುತ್ತದೆ. ಶ್ರೀ ಜಯಚಾಮರಾಜ ಒಡೆಯರು ರಾಜ ವಂಶದಲ್ಲಿ ಹುಟ್ಟಿ ಬೆಳೆದು ಒಳ್ಳೆಯ ರೀತಿಯಲ್ಲಿ ಆಳ್ವಿಕೆಯನ್ನು ನಡೆಸಿದರು ಎಂಬ ಅಂಶ ಎಲ್ಲರೂ ಮೆಚ್ಚತಕ್ಕದ್ದಾಗಿದೆ. ಅದನ್ನು ಜನರು ಚರಿತ್ರೆಯಲ್ಲಿ ನೋಡುವರು. ರಾಜರುಗಳಲ್ಲಿ ಅನೇಕರು ಒಳ್ಳೆಯವರಲ್ಲ. ಮೈಸೂರು ಮಹಾರಾಜರಂಥ ಒಳ್ಳೆಯ ರಾಜರುಗಳಿರುವುದು ಬಹಳ ಅಪರೂಪ, ಒಳ್ಳೆಯ ಆಳ್ವಿಕೆ ನಡೆಸುವವರೂ ವಿರಳ. ಅಂಥವರಲ್ಲಿ ನಮ್ಮ ಜಯಚಾಮರಾಜ ಒಡೆಯರು ಒಬ್ಬರಾಗಿದ್ದರೆಂಬುವನ್ನು ಮರೆಯಬಾರದು. ಅವರು ಪ್ರಜಾಪ್ರಭುತ್ವ ಪದ್ಧತಿಗೆ ಹೊಂದಿಕೊಂಡು ಜನಸಾಮಾನ್ಯರ ತೊಂದರೆಗಳನ್ನು ನಿವಾರಣೆ ಮಾಡಿದರು. ಅವರಿಂದ ನಾವು ಒಂದು ಪಾಠ ಕಲಿಯಬೇಕಾಗಿದೆ. ಒಬ್ಬ ವ್ಯಕ್ತಿ ಮಂತ್ರಿಯಾಗಿದ್ದಾಗ ಅಥವ ಅಧಿಕಾರದಲ್ಲಿದ್ದಾಗ ಹೇಗಿರಬೇಕೆಂಬುವನ್ನು ಮೈಸೂರು ಮಹಾರಾಜರಿಂದ ಕಲಿಯಬೇಕು. ಅವರು ಕೆಲವು ವಿಚಾರಗಳಲ್ಲಿ ಬಹಳ ತೊಂದರೆಯಿಂದ ನರಳುತ್ತಿದ್ದರು, ಅನೇಕ ಮಾನಸಿಕ ಒತ್ತಡಗಳಿಗೆ ಒಳಗಾಗಿದ್ದರು ಎಂದು ಕೇಳಿದ್ದೇವೆ. ಶ್ರೀಮಾನ್ ಸಿದ್ದವೀರಪ್ಪನವರೊಂದಿಗೆ ಅರಮನೆಯ ವಿಚಾರ ಚರ್ಚಿಸಿದಾಗ ಇದು ಗೊತ್ತಾಯಿತು. ಎಷ್ಟೋ ವೇಳೆ ಸಾಮಾನ್ಯ ಜನರು ಮೈಸೂರು ಮಹಾರಾಜರು ಬಹಳ ಒಳ್ಳೆಯ ವ್ಯಕ್ತಿ ಎಂದು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದನ್ನು ನಾವು ಕೇಳಿದ್ದೇವೆ. ನಾನು ಮಹಾರಾಜರಿಗಿದ್ದ ಅನುಭವವನ್ನು ನೋಡಿದ್ದೇನೆ, ಅವರು ಒಂದು ಒಳ್ಳೆಯ ವಾತಾವರಣವನ್ನು ಸೃಷ್ಟಿಮಾಡಿದರು. ಅವರು ಒಳ್ಳೆಯ ಅನುಭವ ಪಡೆದಿದ್ದರು. ಅವರ ಬಗ್ಗೆ ಜನರಿಗಿದ್ದ ಅಪಾರ ನಂಬಿಕೆಯನ್ನು ಅಲ್ಲಗಳೆಯುವಂತಿಲ್ಲ. ಅದು ಕಡಿಮೆಯಾಗಲು ಅವಕಾಶವಿರಲಿಲ್ಲ.

ಶ್ರೀಮಾನ್ ಮಹಾರಾಜರವರಿಗೆ ಇಂಥ ಅಕಾಲ ಮರಣ ಬರಬಾರದಿತ್ತು. ಅದು ದೇವರ ಇಚ್ಛೆ. ಈ ಒಂದು ಸಂದರ್ಭದಲ್ಲಿ ಅವರ ಅಕಾಲ ಮರಣಕ್ಕೆ ಸಂತಾಪ ಸೂಚನೆ ಮಾಡತಕ್ಕದ್ದು ನಮ್ಮ ಕರ್ತವ್ಯ. ನಾವು ಒಬ್ಬ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ ಎನ್ನುವ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು, ವಿರೋಧಪಕ್ಷದ ನಾಯಕರು ಹಾಗೂ ಅನೇಕ ಜನ ಸದಸ್ಯರು ಸ್ಪಷ್ಟಪಡಿಸಿದ್ದಾರೆ. ಅವರ ಜೊತೆಗೆ ನಾನೂ ಕೂಡ ಭಾಗಿಯಾಗುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಇಂದು ಶ್ರೀ ಜಯಚಾಮರಾಜ ಒಡೆಯರ್ ಅವರು ನಮ್ಮ ಕಣ್ಣೆದುರಿಗೆ ಇಲ್ಲ. ಇತಿಹಾಸದ ಉದ್ದಕ್ಕೂ ಸಮಾಜ ಬೆಳೆದು ಬಂದದ್ದನ್ನು ನೋಡಿದರೆ ಇಂಥ ಘಟನೆಗಳು ಎಲ್ಲಿಯೂ ಆಗಿಲ್ಲ. ಫ್ರಾನ್ಸಿನಲ್ಲಾಗಲಿ, ರಷ್ಯಾ ದೇಶದಲ್ಲಿ ಆಗಲೀ ಅಲ್ಲಿ ಚಕ್ರವರ್ತಿ ಮತ್ತು ರಾಜರುಗಳ ಗತಿ ಏನಾಯಿತು ಎನ್ನುವುದನ್ನು ನಾವು ಚರಿತ್ರೆಯಲ್ಲಿ ಕಂಡಿದ್ದೇವೆ. ಫ್ರಾನ್ಸ್ ದೇಶದ ಚಕ್ರವರ್ತಿ ಜನರ ಕೋಪಕ್ಕೆ ತುತ್ತಾದರು, ರಷ್ಯಾ ದೇಶದ ಚಕ್ರವರ್ತಿಗಳು ಜನರ ಆಕ್ರೋಶಕ್ಕೆ ತುತ್ತಾದರು. ಆದರೆ ನಮ್ಮ ಮೈಸೂರಿನ ಮಹಾರಾಜರು ಜನತೆಯಿಂದ ಅಗಲಿದರೂ ಜನರ ಪ್ರೀತಿಯನ್ನು ವಿಶ್ವಾಸವನ್ನು ಗಳಿಸಿ ನಮ್ಮ ಮುಂದೆ ಇಲ್ಲದಂತಾಗಿದ್ದಾರೆ. ಅವರ ವಿಷಯದಲ್ಲಿ ನನ್ನ ಮಿತ್ರರುಗಳು, ಮತ್ತು ವಿರೋಧ ಪಕ್ಷದ ನಾಯಕರು ಹೇಳಿರತಕ್ಕ ಮಾತುಗಳಿಗೆ ನಾನು ಪೂರ್ಣ ಬೆಂಬಲ ವ್ಯಕ್ತಮಾಡುತ್ತೇನೆ. ರಾಜಮನೆತನದವರು ತಮ್ಮ ಆಳ್ವಿಕೆಯನ್ನು ಕಳೆದುಕೊಂಡ ಮೇಲೆ ನಾವು ಪ್ರಜಾಪ್ರಭುತ್ವ ತತ್ವದ ಮೇಲೆ ಆಡಳಿತವನ್ನು ನಡೆಸುತ್ತಿದ್ದೇವೆ. ಯಾವ ಒಂದು ಅಹಿತಕರವಾದ ಘಟನೆಗೂ ಎಡೆಗೊಡದೆ ಶ್ರೀ ಜಯಚಾಮರಾಜ ಒಡೆಯರ್ ಅವರು ಬೆಳೆದಂಥ ಪರಿಸ್ಥಿತಿಗೆ ಹೊಂದಿಕೊಂಡು ನಾನು ಒಬ್ಬ ಭಾರತದ ಪ್ರಜೆ ಎನ್ನುವುದನ್ನು ಹೆಚ್ಚಿನ ರೀತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಅವರಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

† ಶ್ರೀ ಎಚ್. ಡಿ. ಚೆನ್ನಪ್ಪ (ಮಾಗಡಿ).—ಸನ್ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮನ್ನು ಬಹಳ ವರ್ಷಗಳ ಕಾಲ ಆಳಿ ಅಗಲಿರತಕ್ಕ ಶ್ರೀ ಜಯಚಾಮರಾಜ ಒಡೆಯರ್ ಅವರ ನಿಧನದ ಬಗ್ಗೆ ಸಂತಾಪ ಸೂಚನೆಯನ್ನು ಮಾಡುವುದಕ್ಕೋಸ್ಕರ ನಾನು ನಿಂತಿದ್ದೇನೆ. ಅನೇಕ ಜನ ರಾಜ ಮಹಾರಾಜರುಗಳು ನಮ್ಮ ದೇಶವನು ಆಳಿದವರ ಪೈಕಿ ನಮ್ಮ ಜಯಚಾಮರಾಜ ಒಡೆಯರ್ ಅವರು ಒಬ್ಬರಾದರೂ ಕೂಡ ಮೊಟ್ಟಮೊದಲನೆಯದಾಗಿ ಪ್ರಜೆಗಳ ಅಭಿಪ್ರಾಯವನ್ನು ತಿಳಿದು ಪ್ರಜೆಗಳಿಗೆ ಅನುಕೂಲವಾಗುವಂತೆ ರಾಜ್ಯಭಾರ ಮಾಡಿದವರಲ್ಲಿ ಜಯಚಾಮರಾಜ ಒಡೆಯರ್ ಅವರು ಮೊದಲನೆಯವರು, ಅಗ್ರಗಣ್ಯರು ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಸ್ವಾತಂತ್ರ್ಯ ಹೋರಾಟದಲ್ಲಿ, ನಮ್ಮ ದೇಶ ಸ್ವತಂತ್ರ ಆಗಬೇಕು ಎನ್ನುವ ಮನೋಭಾವನೆಯನ್ನು ತಾಳಿ ಸ್ವಾತಂತ್ರ್ಯ ಹೋರಾಟಕ್ಕೆ ಅನೇಕ ರೀತಿಯಲ್ಲಿ ಸಹಾಯ ಮಾಡಿಕೊಟ್ಟಿದ್ದಾರೆ. ಪ್ರಜೆಗಳಲ್ಲಿ ನಮ್ಮ ದೇಶದ ಸಂಸ್ಕೃತಿ, ನಮ್ಮ ದೇಶದ ಖ್ಯಾತಿಯನ್ನು ಸಾರಿದವರಲ್ಲಿ ಇವರೇ ಮೊದಲಿಗರು.

(ಶ್ರೀ ಎಚ್. ಜಿ. ಚನ್ನಪ್ಪ)

ಹಿಂದೆ ಸ್ವಾಮಿ ವಿವೇಕಾನಂದ ಅವರು ಚಿಕ್ಯಾಗೋನಲ್ಲಿ ನಡೆದ ಸಮ್ಮೇಳನಕ್ಕೆ ಹೋಗಲು ಸಹಾಯ ಮಾಡಿದವರು ನಮ್ಮ ಮಹಾರಾಜರು. ಇಡೀ ಭರತ ಖಂಡದಲ್ಲಿ ನಮ್ಮ ರಾಜ್ಯ ಹೆಚ್ಚಿನ ಮಟ್ಟದಲ್ಲಿ ಇದೆಯೆಂದು ತೋರ್ಪಡಿಸಿದಂಥ ಮಹಾನ್ ವ್ಯಕ್ತಿಗಳಲ್ಲಿ ಇವರೂ ಒಬ್ಬರಾಗಿದ್ದಾರೆ. ಇವರು ನಮ್ಮ ದೇಶದ ಜನರ ಮನಸ್ಸನ್ನು ಸೂರೆಗೊಂಡಿರುವುದು ಅಷ್ಟೇ ಅಲ್ಲ, ತಮಿಳುನಾಡಿನ ರಾಜ್ಯಪಾಲರಾಗಿ ಆ ದೇಶದ ಜನರ ಮನಸ್ಸನ್ನು ಸೂರೆಗೊಳ್ಳಬೇಕಾದರೆ, ಅವರಲ್ಲಿ ಎಂಥ ಉದಾತ್ತವಾದ ಮನೋಭಾವ ಇತ್ತು ಎನ್ನುವುದು ಕಾಣುತ್ತದೆ. ಇವರು ಅಲ್ಲಿ ರಾಜಪ್ರಮುಖರಾಗಿದ್ದು, ಆ ಪದವಿಯನ್ನು ಬಿಟ್ಟು ಬಂದಮೇಲೂ ಆ ದೇಶದ ಜನರು ದಸರಾ ಉತ್ಸವಕ್ಕೆ ಬರುವುದನ್ನು ನೋಡಿದರೆ ಅವರು ಎಷ್ಟರಮಟ್ಟಿಗೆ ಅಲ್ಲಿಯ ಜನರ ವಿಶ್ವಾಸವನ್ನು ಗಳಿಸಿದ್ದರು ಎನ್ನುವುದು ಸಾಕ್ಷಿಭೂತವಾಗಿ ಕಾಣುತ್ತದೆ. ಇವರು ಯಾವ ಅಧಿಕಾರಕ್ಕೂ ಅಪೇಕ್ಷೆ ಪಡದೆ, ಸರಳ ರೀತಿಯಲ್ಲಿ ಕಾಲಕ್ಕೆ ಸರಿಯಾಗಿ ಹೊಂದಿಕೊಂಡು ತಮ್ಮ ಪ್ರಾಣವನ್ನು ನೀಗಿದರು. ಅನೇಕ ಜನರು ಇಂಥ ಪ್ರಭುಗಳಿಗೆ ಎಂಥ ಪರಿಸ್ಥಿತಿ ಬಂತು ಎಂದು ಅನೇಕ ಸಂದರ್ಭಗಳಲ್ಲಿ ಪಶ್ಚಾತ್ತಾಪ ಪಡುತ್ತಿದ್ದಾರೆ. ಅವರಿಗೆ ಇಂಥ ಅಕಾಲ ಮರಣ ಬರಬಾರದಾಗಿತ್ತು ಎಂದು ಹೇಳುವವರಲ್ಲಿ ನಾನೂ ಒಬ್ಬ. ಅವರ ಗುಣ ಔದಾರ್ಯ ಎಷ್ಟರಮಟ್ಟಿಗೆ ಇತ್ತು ಎನ್ನುವುದನ್ನು ಎತ್ತಿ ತೋರಿಸಿದ್ದಾರೆ. ಇಂಥ ಪ್ರಭುಗಳು ಪುನಃ ಜನ್ಮವೆತ್ತಿ ನಮ್ಮ ದೇಶಕ್ಕೆ ಬಂದು ನಮಗೆ ಮಾರ್ಗದರ್ಶನ ನೀಡಲಿ. ಇಂಥ ಪ್ರಭುಗಳಿಗೆ ದೇವರು ಚಿರಶಾಂತಿಯನ್ನು ಕರುಣಿಸಲಿ, ಮತ್ತು ಅವರ ಕುಟುಂಬ ವರ್ಗದವರಿಗೆ ದೇವರು ಹೆಚ್ಚಿನ ಐಶ್ವರ್ಯಾದಿಗಳನ್ನು ಕೊಟ್ಟು ಇವರು ನಡೆದಂಥ ಧರ್ಮ ಮಾರ್ಗವನ್ನು ಅವರೂ ಸಹ ಪರಿಪಾಲನೆ ಮಾಡುವುದಕ್ಕೆ ಸರ್ವಶಕ್ತಿಯನ್ನು ದಯಾಮಯನು ಕರುಣಿಸಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗಿರಿ).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಮಹಾರಾಜರವರ ಅಕಾಲಮರಣಕ್ಕೆ ಸಂತಾಪಸೂಚಿಸುವಂಥ ಸಂದರ್ಭದಲ್ಲಿ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಶ್ರೀಮಾನ್ ಮಹಾರಾಜರವರು ಸತ್ಯ ಧರ್ಮದಿಂದ ರಾಜ್ಯವನ್ನು ಆಳಿ ಜನರಲ್ಲಿ ಅಪಾರವಾದ ಭಕ್ತಿ ವಿಶ್ವಾಸವನ್ನು ಗಳಿಸಿ ನಮ್ಮನ್ನು ಅಗಲಿಹೋಗಿದ್ದಾರೆ ನಮ್ಮಲ್ಲಿ ಮಹಾರಾಜರು ಬರುತ್ತಾರೆ ಎಂದು ತಿಳಿದರೆ ಸಾಕು ಹಳ್ಳಿಗಳಿಂದ ಜನ ಸಹಸ್ರಾರು ಸಂಖ್ಯೆಯಲ್ಲಿ ಬಂದು ತಮ್ಮ ಭಕ್ತಿ ವಿಶ್ವಾಸವನ್ನು ತೋರಿಸುತ್ತಿದ್ದರು. ನನ್ನ ಅನುಭವದಲ್ಲಿ ಇಷ್ಟೊಂದು ಭಕ್ತಿ ವಿಶ್ವಾಸವನ್ನು ಪಡೆಯತಕ್ಕಂಥವರನ್ನು ಯಾರನ್ನೂ ನೋಡಲಿಲ್ಲ. ಅವರ ದರ್ಶನ ಆದರೆ ಸಾಕು ಎನ್ನುವ ಜನ ಇದ್ದರು. ಅದೇ ಜನರು ಇವತ್ತಿನ ದಿವಸ ಅರಮನೆಯ ಪರಿಸ್ಥಿತಿಯನ್ನು ನೋಡಿ ನಿಟ್ಟುಸಿರು ಬಿಡುತ್ತಿದ್ದಾರೆ. ಅರಸು ರಾಜಮನೆತನ ಯಾವ ತರಹ ಇತ್ತು, ಈಗ ಹೇಗೆ ಆಗಿದೆ ಎನ್ನುವುದನ್ನು ನೋಡಿದರೆ ನಮಗೆ ಬೇಜಾರು ಆಗುತ್ತದೆ. ಅವರು ನಿಜವಾದ ಸಮತಾವಾದಿ ಎಂದು ಹೇಳಬಹುದು. ಅವರು ಸಮಾಜವಾದವನ್ನು ಬಾಯಲ್ಲಿ ಹೇಳಿದವರಲ್ಲ, ಸಮಾಜವಾದಕ್ಕೆ ತಲೆಬಾಗಿ ಅದನ್ನು ಕೃತಿಯಲ್ಲಿ ಮಾಡಿ ತೋರಿಸಿದವರು. ಅವರು ನಮ್ಮ ಜನಕ್ಕೆ ಮಾದರಿಯಾಗಿದ್ದಾರೆ. ಉದಾಹರಣೆಗೆ, ಭೂಸುಧಾರಣೆ ಬಂದಮೇಲೆ ಅನೇಕ ಜನ ತಮ್ಮ ಜಮೀನನ್ನು ಸರ್ಕಾರಕ್ಕೆ ಬಿಟ್ಟುಕೊಡುವರು. ಆದರೆ ಮಹಾರಾಜರೇ ತಮ್ಮ ಅಧಿಕಾರವನ್ನು ಬಿಟ್ಟು ಕೊಟ್ಟರು ಜನಸಾಮಾನ್ಯರೂ ಕೂಡ ನಾವೂ ಅವರಂತೆ ನಡೆಯೋಣ ಎಂದು ಹೇಳುತ್ತಿದ್ದಾರೆ. ಈ ರೀತಿಯಾಗಿ ಜನತೆಗೆ ಮಾದರಿಯಾಗಿ ಅವರು ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದರು. ಆದ್ದರಿಂದಲೇ ಅವರನ್ನು ಸಮತಾವಾದಿ ಎನ್ನುವುದರಲ್ಲಿ ತಪ್ಪಿಲ್ಲ. ಅವರ ನಿಧನದಿಂದ ನಮಗೆ ಅಪಾರವಾದ ನಷ್ಟವಾಗಿದೆ ಎಂದರೆ ತಪ್ಪೇನು ಇಲ್ಲ. ಅವರಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:— ಮಾನ್ಯ ಮುಖ್ಯ ಮಂತ್ರಿಗಳು ಇಟ್ಟಿರತಕ್ಕ ನಿರ್ಣಯವನ್ನು ಬೆಂಬಲಿಸಿ, ಅವರೊಂದಿಗೆ ನನ್ನ ಧ್ವನಿಯನ್ನೂ ಕೂಡಿಸಿ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಮಹಾರಾಜರಾಗಿದ್ದ ಮತ್ತು ತಮಿಳುನಾಡಿನ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರ ಜೀವನ ಜ್ಯೋತಿ ನಂದಿ ಇಂದಿಗೆ ನಾಲ್ಕೂವರೆ ತಿಂಗಳುಗಳಾದವು ಇವತ್ತು ನಾವು ಅವರನ್ನು ನೆನಸಿಕೊಂಡಾಗ ಅವರು ಅರಮನೆಯಲ್ಲಿ ಇರಬಹುದು, ಅಥವಾ ಹೊರ ದೇಶದಲ್ಲಿ ಇರಬಹುದು, ನಮ್ಮ ದೇಶಕ್ಕೆ ವಾಪಸ್ ಬರುತ್ತಾರೆ ಎನ್ನುವ ಭಾವನೆ ಎಲ್ಲರಲ್ಲೂ ಬರುತ್ತದೆ. ಅವರನ್ನು ಮತ್ತೊಮ್ಮೆ ನೋಡುವುದಕ್ಕೆ ಆಗುವುದಿಲ್ಲ ಎನ್ನುವ ಭಾವನೆ ಬಂದಾಗ ಜನರಿಗೆ ಬಹಳ ವ್ಯಸನವಾಗುತ್ತದೆ.

2-00 P. M.

ಇಂಥ ಅನೇಕ ಜನ ಬದುಕಿ ಸತ್ತು ಹೋಗಿರುತ್ತಾರೆ ಆದರೆ ಈ ವಿಭೂತಿ ಪುರುಷರು ಸತ್ತು ಬದುಕಿದ್ದಾರೆ. ಈ ನಮ್ಮ ಮಹಾರಾಜರ ಪರಿಚಯ ಬಹಳ ವರ್ಷಗಳಿಂದ ನನಗೆ ಇತ್ತು. ಅವರ ಕುಟುಂಬದವರು ಅವರ ತಾಯಿಯವರು ಅವರ ದೊಡ್ಡಮ್ಮನವರು ಇನ್ನು ಅವರ ಪರಿವಾರದವರು ಬಹಳಮಟ್ಟಿಗೆ ಅಂದರೆ ಹೆಚ್ಚುಕಡಿಮೆ ಚಾಮುಂಡಿ ವಿಹಾರದಲ್ಲಿ ಕ್ಲಬ್‍ಗಳಲ್ಲಿ ಆಟಪಾಠಗಳಲ್ಲಿ ನಾವುಗಳು ಒಟ್ಟಾಗಿ ಒಂದುಕಡೆ ಸೇರುತ್ತಿದ್ದೆವು. ಬಹುತೇಕ ನನಗೆ ಅವರ ಮನೆತನದವರು ಪರಿಚಯವಿದ್ದುದರಿಂದ ಅವರ ಪರಿಚಯ ನನಗೆ ಜಾಸ್ತಿಯಾಗಿತ್ತು. ನಾವು ಇಂಥ ಮಹಾನ್ ವ್ಯಕ್ತಿ ಮಹಾರಾಜರನ್ನು ಕಳೆದುಕೊಂಡಂಥವರು ಹೀನ ಅದೃಷ್ಟವಂತರು ಎಂದು ಹೇಳದೆ ವಿಧಿಯಿಲ್ಲ. ಅವರಲ್ಲಿ ಇವರು ದೊಡ್ಡವರು, ಇವರು ಚಿಕ್ಕವರು, ಇವರು ಬಡವರು ಇವರು ಬಲ್ಲಿದರು ಎನ್ನುವ ಭಾವನೆ ಇರಲಿಲ್ಲ. ನಾನು ವಿಧಾನ ಸಭೆಯ ಸ್ಪೀಕರ್ ಆಗಿ ಆರಿಸಿ ಬಂದಾಗ ಅವರಿಗೆ ಗೌರವ ಸೂಚಿಸುವುದಕ್ಕೆ ಹೋದಾಗ ಅವರು ನನಗೆ ಹೇಳಿದ್ದು ಈಗ ಹೇಳಿದಂತೆ ಭಾಸವಾಗುತ್ತದೆ. ನೀವು ಚೆನ್ನಾಗಿ ಕೆಲಸ ಮಾಡಬೇಕು, ನೀವು ಮೈಸೂರಿನವರು ಮೈಸೂರಿಗೆ ಒಳ್ಳೆಯ ಕೀರ್ತಿಯನ್ನು ತರ ಬೇಕೆಂದು ಹೇಳಿದಾಗ ಅದಕ್ಕೆ ನಾನು ನನ್ನ ಶಕ್ತಿಮೀರಿ ಆ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದೆ. ಅದಕ್ಕೆ ಅವರು ನಿಮ್ಮ ಜೊತೆಯಲ್ಲಿ ಯಾವಾಗಲೂ ಚಾಮುಂಡೇಶ್ವರಿ ಇರುತ್ತಾಳೆ. ಅವಳ ಕೃಪೆ ನಿಮ್ಮ ಮೇಲೆ ಸದಾ ಇರುತ್ತದೆ, ಆಶೀರ್ವಾದ ಇರುತ್ತದೆ ಎಂದು ಹೇಳಿದರು. ಅಂಥ ತಾಯಿತಂದೆಯಾಗಿ, ಅಣ್ಣನಾಗಿ ನಮ್ಮನ್ನು ನೋಡಿಕೊಂಡು ನಮ್ಮನ್ನು ಕಾಪಾಡಿಕೊಂಡು ಬಂದಂಥ ನಮ್ಮ ಮಹಾರಾಜರನ್ನು ಮತ್ತು ಶ್ರದ್ಧಾವಂತ ಸತ್‍ಪ್ರಜೆಯನ್ನು ಕಳೆದುಕೊಂಡ ಕರ್ನಾಟಕ ರಾಜ್ಯ ಬಹಳ ನಷ್ಟಪಟ್ಟಿದೆ. ಇಂಥ ವಿಭೂತಿ ಪುರುಷರನ್ನು ಕಳೆದುಕೊಂಡ ನಮಗೆ ದೇವರು ಬಹಳ ನಷ್ಟ ಉಂಟುಮಾಡಿದ್ದಾನೆಂದು ಹೇಳದೆ ವಿಧಿಯಿಲ್ಲ. ಇಂಥ ಕ್ರೂರ ವಿಧಿಗೆ ಯಾರ ಮೇಲೂ ದಯೆ ಇರುವುದಿಲ್ಲ. ಇವರ ನಿಧನದಿಂದ ಅವರ ಕುಟುಂಬಕೆ ಭರಿಸಲಾರದ ನಷ್ಟವುಂಟಾಗಿದೆ. ಶ್ರೀಮನ್ ಮಹಾರಾಜರ ಆತ್ಮಕ್ಕೆ ಶಾಂತಿ ಕೋರಿ ಅವರ ಕುಟುಂಬಕ್ಕೆ ಆದ ದುಃಖವನ್ನು ಭರಿಸಲು ಭಗವಂತನು ಶಕ್ತಿ ಸಹನೆಯನ್ನು ಕೊಡಲು ಎರಡು ನುಡಿಮಲ್ಲಿಗೆಯನ್ನು ಅರ್ಪಿಸುತ್ತೇನೆ. ಶ್ರೀಮನ್ ಮಹಾರಾಜರ ಆತ್ಮಕ್ಕೆ ಶಾಂತಿ ಕೋರುವ ಈ ನಿರ್ಣಯ ಪಾಸುಮಾಡಿ ಎಲ್ಲರೂ ಎರಡು ನಿಮಿಷಗಳ ಮೌನವನ್ನು ಆಚರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

'' ಹಿಂದಿನ ಮೈಸೂರಿನ ಮಹಾರಾಜರಾಗಿ, ರಾಜ್ಯ ವಿಲೀನೀಕರಣದ ನಂತರ ರಾಜಪ್ರಮುಖರಾಗಿ, ರಾಜ್ಯ ಪುನರ್ರಚನೆಯ ನಂತರ ಮೈಸೂರಿನ ರಾಜ್ಯಪಾಲರಾಗಿ, ಕೆಲವು ಕಾಲ ಹಿಂದಿನ ಮದ್ರಾಸು ರಾಜ್ಯದ ರಾಜ್ಯಪಾಲರಾಗಿ, ಶ್ರೀ ಜಯಚಾಮರಾಜ ಒಡೆಯರ್ ಅವರು ನಾಡಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ.

ಮೈಸೂರು ಮಾದರಿ ರಾಜ್ಯವೆಂದು ಪರಿಗಣಿಸಲು ಕಾರಣವಾದ ಯದುವಂಶದ ಉನ್ನತ ಪರಂಪರೆಯನ್ನು ಅವರು ಉಳಿಸಿ ಬೆಳೆಸಿಕೊಂಡು ಬಂದಿದ್ದರು.

ಭಾರತೀಯ ಹಾಗೂ ಪಾಶ್ಚಾತ್ಯ ತತ್ವ ಶಾಸ್ತ್ರಗಳಲ್ಲಿ ಅದ್ಭುತ ಪಾಂಡಿತ್ಯ ಭಾರತೀಯ ಹಾಗೂ ಪಾಶ್ಚಿಮಾತ್ಯ ಸಂಗೀತಗಳಲ್ಲಿ ಅಸಮಾನ್ಯ ಅಭಿರುಚಿಗಳಿಂದ ಪ್ರಪಂಚದಾದ್ಯಂತ ಮನ್ನಣೆ ಗಳಿಸಿದುದೇ ಅಲ್ಲದೆ, ಶ್ರೀ ಜಯಚಾಮರಾಜ ಒಡೆಯರು ಸ್ವಾತಂತ್ರ್ಯಾನಂತರ ಉಂಟಾದ ಬದಲಾವಣೆಗಳ ಸಮಯದಲ್ಲಿ ಸಮಕಾಲೀನ ಪ್ರಜ್ಞೆಯನ್ನು ಪ್ರದರ್ಶಿಸಿ ಜನತೆಯ ಪ್ರೀತಿ ವಿಶ್ವಾಸ ಗಳನ್ನುಗಳಿಸಿದ್ದರು.

ಭಾರತೀಯ ಧರ್ಮ. ಸಂಸ್ಕೃತಿ ಹಾಗೂ ಕಲಾ ಪರಂಪರೆಯ ಪ್ರತಿಪಾದಕರಾಗಿ ರಾಜ್ಯದ ಆದರ್ಶ ಆಡಳಿತಗಾರರಾಗಿ ಕನ್ನಡ ನಾಡು, ನುಡಿ, ಜನತೆಯ ಶ್ರೇಯಸ್ಸಿಗೆ ಶಕ್ತಿಮೀರಿ ಶ್ರಮಿಸಿದ ಈ ಶ್ರೇಷ್ಠ ವ್ಯಕ್ತಿಯ ನಿಧನದಿಂದ ತುಂಬಲಾಗದ ನಷ್ಟವುಂಟಾಗಿದೆ.

(ಅಧ್ಯಕ್ಷರು)

ಶ್ರೀ ಜಯಚಾಮರಾಜ ಒಡೆಯರ್ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿ ವಿಧಾನ ಸಭೆ ಅವರ ನೆನಪಿಗೆ ಗೌರವ ಸೂಚಿಸುತ್ತದೆ. ಅವರ ಕುಟುಂಬದ ವರ್ಗದವರಿಗೆ ಈ ಅಗಲಿಕೆ ಯಿಂದುಂಟಾಗಿರುವ ದುಃಖವನ್ನು ಭರಿಸಲು ದೇವರು ಶಕ್ತಿಯನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತದೆ. ''

(*The Resolution was adopted nem-con. the House standing in silence for two minutes.*)

The House will now rise to meet again tomorrow at 8-30 A.M.

The House adjourned at Five Minutes past Two of the Clock to meet again at Thirty Minutes past Eight of the Clock on Wednesday, the 12th February, 1975.